ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

# ಸ್ವಾಭಿಮಾನಿ ಸಹಕಾರಿ

Swabhimani Sahakari

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

Volume - 12
Issue - 7
Pages - 20
₹ - 12
July - 2014

## ನೂತನ ಕೇಂದ್ರ ಸರ್ಕಾರದ ಬಜೆಟ್ ನಿರೀಕ್ಷೆಗಳು






ತೆರಿಗೆ ವಿನಾಯ್ತಿ ಮಿತಿ
ರೂ. 3.50 ಲಕ್ಷಕ್ಕೆ ಏರಿಕೆ



ಹಣಕಾಸು ಕ್ಷೇತ್ರದಲ್ಲಿ
ಕೆಲವು ಸುಧಾರಣಾ ಕ್ರಮ





ರಕ್ಷಣಾ ಮತ್ತು ರೈಲ್ವೆ ಕ್ಷೇತ್ರದಲ್ಲಿ
ವಿದೇಶಿ ನೇರ ಹೂಡಿಕೆಗೆ ಅವಕಾಶ



ಸೌಹಾರ್ದ ಸಹಕಾರಿ ಕಾಯ್ದೆಗೆ ಅಗತ್ಯ ತಿದ್ದುಪಡಿ ಹಾಗೂ ಪ್ರತ್ಯೇಕ ನ್ಯಾಯಾಲಯ ಮಂಜೂರಿಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿಯೋಗಕ್ಕೆ ಸಹಕಾರ ಸಚಿವ ಶ್ರೀ ಎಚ್.ಎಸ್.ಮಹದೇವಪ್ರಸಾದ್ ಭರವಸೆ

ಸೌಹಾರ್ದ ಸಹಕಾರಿಗಳ ಸಂಖ್ಯೆ : 2890 । 'ಇ' ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 615



# ಸೌಹಾರ್ದ ಸಹಕಾರಿಗಳ ನಿಯೋಗಕ್ಕೆ ಮಾನ್ಯ ಸಹಕಾರ ಸಚಿವರ ಸಕಾರಾತ್ಮಕ ಸ್ಪಂದನೆ ಸ್ವಾಗತಾರ್ಹ, ಪ್ರೋತ್ಸಾಹಕರ. ರಾಜ್ಯದ ಸೌಹಾರ್ದ ಸಹಕಾರಿಗಳ ಪರವಾಗಿ ಅಭಿನಂದನೆಗಳು

ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ದಿನಾಂಕ : 13-6-2014 ರಂದು ರಾಜ್ಯದ ಸೌಹಾರ್ದ ಸಹಕಾರಿಗಳ ನಿಯೋಗವು ರಾಜ್ಯದ ಸಹಕಾರ ಸಚಿವ ಶ್ರೀ ಎಚ್. ಎಸ್. ಮಹದೇವಪ್ರಸಾದರವರನ್ನು ಅವರ ಸಚಿವಾಲಯದಲ್ಲಿ ಭೇಟಿ ಮಾಡಿ ಸೌಹಾರ್ದ ಸಹಕಾರಿಗಳ ಸಮಸ್ಯೆಗಳ ಬಗ್ಗೆ ಮನವಿ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ರಾಜ್ಯದ ಮಾಹಿತಿ ಹಾಗೂ ತಂತ್ರಜ್ಞಾನ ಸಚಿವರಾದ ಶ್ರೀ ಎಸ್.ಆರ್. ಪಾಟೀಲ್ ಸಹಕಾರ ಇಲಾಖೆಯ ಕಾರ್ಯದರ್ಶಿ ಡಾ.ಸಿ.ಸೋಮಶೇಖರ, ಸಹಕಾರಿಗಳ ನಿಬಂಧಕರಾದ ಶ್ರೀ ಎಸ್.ಎನ್.ಚನ್ನಪ್ಪಗೌಡ ಸಹಕಾರ ಇಲಾಖೆಯ ಹಿರಿಯ ಅಧಿಕಾರಿಗಳು ಸಂಯುಕ್ತ ಸಹಕಾರಿಯ ಉಪಾಧ್ಯಕ್ಷ ಶ್ರೀ ಹೆಚ್. ವಿ.ರಾಜೀವ, ವಿಧಾನ ಪರಿಷತ್ ಸದಸ್ಯ ಶ್ರೀ ಅರುಣ ಶಹಾಪುರ, ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರುಗಳಾದ ಶ್ರೀ ಮನೋಹರ ಮಸ್ಕಿ, ಶ್ರೀ ವಿಶ್ವನಾಥ ಹಿರೇಮಠ, ಸಂಯುಕ್ತ ಸಹಕಾರಿಯ ನಿರ್ದೇಶಕರುಗಳು ಹಾಗೂ ಅಧಿಕಾರಿಗಳೂ ಸೇರಿ 50ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳ ಅಧ್ಯಕ್ಷರುಗಳು, ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕುಗಳ ಅಧ್ಯಕ್ಷರುಗಳು ಉಪಸ್ಥಿತರಿದ್ದುದು, ನಿಯೋಗಕ್ಕೆ ಬಲ ತಂದು ಕೊಟ್ಟಿತ್ತು.

97ನೇ ಸಂವಿಧಾನ ತಿದ್ದುಪಡಿಯಿಂದ ರಾಜ್ಯದ ಸೌಹಾರ್ದ ಸಹಕಾರಿ ಕಾಯ್ದೆಗೆ ತಿದ್ದುಪಡಿಯಾದ ಸಂದರ್ಭದಲ್ಲಿ ಅನೇಕ ಲೋಪದೋಷಗಳು ಆಗಿವೆ. ಇದರಿಂದಾಗಿ ಸೌಹಾರ್ದ ಸಹಕಾರಿಗಳ ಹಾಗೂ ಸಂಯುಕ್ತ ಸಹಕಾರಿಯ ಕಾರ್ಯಾಚರಣೆಯಲ್ಲಿ ಆಡಳಿತಾತ್ಮಕ ತೊಂದರೆಗಳು ಉದ್ಭವಿಸಿವೆ. ಸಂಯುಕ್ತ ಸಹಕಾರಿಯು ಶಾಸನಾತ್ಮಕವಾಗಿ ಕಾರ್ಯನಿರ್ವಹಿಸಲು ಕಷ್ಟಸಾಧ್ಯವಾಗಿದೆ. ಸಂಯುಕ್ತ ಸಹಕಾರಿಯನ್ನು ಬಲಪಡಿಸುವುದು ಅಗತ್ಯವಾಗಿದೆ. ಈ ಬಗ್ಗೆ ಹಲವು ಬಾರಿ ಸಂಬಂಧಿಸಿದವರ ಗಮನಕ್ಕೆ ತರಲಾಗಿದೆ.ಆದರೆ ಇದುವರೆಗೆ ಸಮಸ್ಯೆಗಳಿಗೆ ಪರಿಹಾರ ದೊರೆತಿರುವುದಿಲ್ಲ. ಇವುಗಳ ಜೊತೆಗೆ ಸೌಹಾರ್ದ ಸಹಕಾರಿಗಳಲ್ಲಿಯ ವ್ಯಾಜ್ಯಗಳ ಶೀಘ್ರ ವಿಲೇಗಾಗಿ ಎರಡು ಪ್ರತ್ಯೇಕ ನ್ಯಾಯಾಲಗಳನ್ನು ಮತ್ತು ದಿ ಕರ್ನಾಟಕ ಅಗ್ರಿಕಲ್ಚರಲ್ ಮಾರ್ಕೆಟಿಂಗ್ ರೆಗುಲೇಶನ್ ಆ್ಯಕ್ಟ್ 1966ಗೆ ತಿದ್ದುಪಡಿ ಮಾಡಿ ಸೌಹಾರ್ದ ಸಹಕಾರಿಗಳಿಗೆ ಅನುಕೂಲ ಕಲ್ಪಿಸುವುದರ ಬಗ್ಗೆ ವಿನಂತಿಸಲಾಯಿತು.

“97ನೇ ಸಂವಿಧಾನ ತಿದ್ದುಪಡಿಯಿಂದ ರಾಜ್ಯದ ಸೌಹಾರ್ದ ಸಹಕಾರಿ ಕಾಯ್ದೆಗೆ ತಿದ್ದುಪಡಿಯಾದ ಸಂದರ್ಭದಲ್ಲಿ ಅನೇಕ ಲೋಪದೋಷಗಳು ಆಗಿವೆ. ಇದರಿಂದಾಗಿ ಸೌಹಾರ್ದ ಸಹಕಾರಿಗಳ ಹಾಗೂ ಸಂಯುಕ್ತ ಸಹಕಾರಿಯ ಕಾರ್ಯಾಚರಣೆಯಲ್ಲಿ ಆಡಳಿತಾತ್ಮಕ ತೊಂದರೆಗಳು ಉದ್ಭವಿಸಿವೆ.”

ಮನವಿಗೆ ಸಕಾರಾತ್ಮವಾಗಿ ಸ್ಪಂದಿಸಿದ ಸಹಕಾರ ಸಚಿವ ಶ್ರೀ ಎಚ್.ಎಸ್.ಮಹದೇವಪ್ರಸಾದರವರು ಸೌಹಾರ್ದ ಸಹಕಾರಿಗಳ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದೇನೆ. ಸ್ವಾಯತ್ತತೆ, ಸ್ವಯಂ ಆಡಳಿತ ಹಾಗೂ ಸ್ವಯಂ ನಿಯಂತ್ರಣ ಧ್ಯೇಯವನ್ನು ಹೊಂದಿರುವ ಸೌಹಾರ್ದ ಸಹಕಾರಿಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ ಇವುಗಳ ಸಮಸ್ಯೆಗಳಿಗೆ ಮುಂಬರುವ ದಿನಗಳಲ್ಲಿ ಪರಿಹಾರ ಒದಗಿಸುವ ಕಾರ್ಯವನ್ನು ಮಾಡಲು ಸರಕಾರ ಬದ್ಧವಾಗಿದೆ. ಸೌಹಾರ್ದ ಸಹಕಾರಿಗಳಲ್ಲಿಯ ವ್ಯಾಜ್ಯಗಳ ಶೀಘ್ರ ವಿಲೇಗಾಗಿ ಪ್ರತ್ಯೇಕ ನ್ಯಾಯಾಲಯಗಳನ್ನು ಮಂಜೂರು ಮಾಡಲಾಗುವುದು. ಎಂದು ತಿಳಿಸಿರುವುದು ಸೌಹಾರ್ದ ಸಹಕಾರಿಗಳ ನಿಯೋಗಕ್ಕೆ ಸಮಾಧಾನ ಹಾಗೂ ಸಂತೋಷವನ್ನು ತಂದಿದೆ. ರಾಜ್ಯದ ಸೌಹಾರ್ದ ಸಹಕಾರಿಗಳ ಪರವಾಗಿ ಮಾನ್ಯ ಸಹಕಾರ ಸಚಿವರನ್ನು ಅಭಿನಂದಿಸುತ್ತೇನೆ.

▸▸ **ಗುರುನಾಥ ಜಾಂತಿಕರ, ಅಧ್ಯಕ್ಷರು**

## ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

**ಶ್ರೀ ಗುರುನಾಥ ಜಾಂತಿಕರ**
ಗೌರವ ಅಧ್ಯಕ್ಷರು

**ಶ್ರೀ ಹೆಚ್.ವಿ.ರಾಜೀವ**
ಗೌರವ ಉಪಾಧ್ಯಕ್ಷರು

**ಶ್ರೀ ಎಸ್.ಆರ್.ಸತೀಶಚಂದ್ರ**
ಗೌರವ ಸದಸ್ಯರು

**ಶ್ರೀ ಶರಣಗೌಡ ಜಿ. ಪಾಟೀಲ್**
ಸಂಪಾದಕರು

**ಶ್ರೀ ವಿ.ಜೆ.ಕಾರಕೂನ**
ಸಂಚಾಲಕರು

**ಶ್ರೀ ರಘುನಂದನ ಕೆ.**
ಸದಸ್ಯರು


## ಒಳ ಪುಟಗಳಲ್ಲಿ . . .


ನೂತನ ಕೇಂದ್ರ ಸರ್ಕಾರದ ಬಜೆಟ್ ನಿರೀಕ್ಷೆಗಳು ........................ 4

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿಯೋಗಕ್ಕೆ ಸಹಕಾರ ಸಚಿವ ಶ್ರೀ ಎಚ್.ಎಸ್.ಮಹದೇವಪ್ರಸಾದ್ ಭರವಸೆ ........ 5

'ಬ್ಯಾಂಕ್ ಪೈಪೋಟಿ ಮಧ್ಯೆ ಸಹಕಾರಿ ಸಂಸ್ಥೆಗಳ ಯಶಸ್ವಿ ಕಾರ್ಯ ನಿರ್ವಹಣೆ ಅಧಿಪ್ರೇರಣೆ ಹಾಗೂ ಗುಣಮಟ್ಟ ನಿರ್ವಹಣೆ ತರಬೇತಿಯಲ್ಲಿ – ಶ್ರೀ ಎಚ್.ವಿ.ರಾಜೀವ್ ........................................................ 6

'ಸ್ಪರ್ಧಾತ್ಮಕವಾಗಿ ಕಾರ್ಯನಿರ್ವಹಿಸಿದರೆ ಮಾತ್ರ ಸಹಕಾರಿಗಳು ಅಸ್ತಿತ್ವ ಉಳಿಸಿಕೊಳ್ಳಲು ಸಾಧ್ಯ' – ಪ್ರವೇಶ ತರಬೇತಿಯಲ್ಲಿ ಸತೀಶ್ ಮರಾಠೆ ... ........................................................................ 7

10 ದಿನಗಳ 11ನೇ ತಂಡದ ವ್ಯಕ್ತಿತ್ವ ವಿಕಸನ ತರಬೇತಿ ಮುಕ್ತಾಯ ತರಬೇತಿಯಿಂದ ಸಹಕಾರಿ ಕ್ಷೇತ್ರದ ಅಭಿವೃದ್ಧಿ ಸಾಧ್ಯ – ಶ್ರೀ ಮುರುಗೇಶ ನಿರಾಣಿ ................................................................ 8

ಸೌಹಾರ್ದ ಸಹಕಾರಿ ಕ್ಷೇತ್ರ ರಾಜ್ಯದ ಸಹಕಾರಿ ಕ್ಷೇತ್ರದಲ್ಲಿ ಸಂಚಲನ ಮೂಡಿಸಿದೆ – ಶ್ರೀ ಗುರುನಾಥ ಜಾಂತಿಕರ.................................... 9

ವಿಶೇಷಾಧಿಕಾರಿಗಳ ನೇಮಕ ................................................ 13

ಕರ್ನಾಟಕದ ಸೌಹಾರ್ದ ಸಹಕಾರಿ ವ್ಯವಸ್ಥೆ ಯಶಸ್ಸಿನ ಬಗ್ಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಅಧ್ಯಯನ ಕುತೂಹಲ – ಪ್ರೊ.ಯಶವಂತ ಡೊಂಗ್ರೆ ............................................................ 15

ಹೊಸಪೇಟೆ ನಗರ ಸಹಕಾರಿಗಳಿಗೆ ಆರೋಗ್ಯ ರಕ್ಷಣಾ ಯೋಜನೆ ಕಾರ್ಯಾಗಾರ ...................................................... 16

ಇ–ಸ್ಟಾಂಪಿಂಗ್ ಸೇವಾ ಕೇಂದ್ರ ............................................ 17

ಸಹಕಾರ ಕ್ಷೇತ್ರದ ಶಕ್ತಿ ಸಾಮರ್ಥ್ಯ, ನ್ಯೂನತೆಗಳು ಅವಕಾಶಗಳು ಹಾಗೂ ಸವಾಲುಗಳು ಒಂದು ವಿಶ್ಲೇಷಣೆ ...................................... 18


# ಸಂಪಾದಕೀಯ

## ವಾರ್ಷಿಕ ಕ್ರಿಯಾ ಯೋಜನೆ ಸಿದ್ಧಪಡಿಸುವ ಹಾಗೂ ಕಾರ್ಯಗತಮಾಡುವುದು ಅಗತ್ಯತೆ

ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳಿಗೆ ಸೆಪ್ಟೆಂಬರ್ 25 ವಾರ್ಷಿಕ ಸಾಮಾನ್ಯ ಸಭೆ ನಡೆಸುವುದು ಶಾಸನ ಬದ್ಧ ಕಾರ್ಯಗಳಲ್ಲಿ ಪ್ರಮುಖವಾದ ಕರ್ತವ್ಯ. ಈ ಸಭೆಯಲ್ಲಿ ಸೌಹಾರ್ದ ಸಹಕಾರಿ ಕಾಯ್ದೆಯ ಕಲಂ 23 ರ ರಿತ್ಯಾ ನೋಟೀಸ್‌ನಲ್ಲಿಯ ವಿಷಯಗಳಲ್ಲಿ ವಾರ್ಷಿಕ ಕ್ರಿಯಾ ಯೋಜನೆಯನ್ನು ಅನುಮೋದನೆಗಾಗಿ ಮಂಡಿಸುವುದು ಅಗತ್ಯ ವಿಷಯಗಳಲ್ಲಿ ಒಂದಾಗಿದೆ. ಯೋಜನಾ ಬದ್ಧ ಕಾರ್ಯನಿರ್ವಹಣೆ ಸೌಹಾರ್ದ ಸಹಕಾರಿಗಳ ಯಶಸ್ಸಿನ ಮೂಲ. (Proper planning leads to progress and prevents problems) ಎಂಬುದನ್ನು ಸೌಹಾರ್ದ ಸಹಕಾರಿಗಳು ಗಮನಿಸಬೇಕು.

ವಾರ್ಷಿಕ ಕ್ರಿಯಾ ಯೋಜನೆ ಕೇವಲ ನಾಮಮಾತ್ರಕ್ಕೆ ಸಿದ್ಧಪಡಿಸಿ ಪುಸ್ತಕದಲ್ಲಿ ಮುದ್ರಿಸಿ ಅನುಮೋದನೆ ಪಡೆದುಕೊಳ್ಳುವುದಕ್ಕೆ ಸೀಮಿತವಾಗಬಾರದು. ವಾರ್ಷಿಕ ಕ್ರಿಯಾಯೋಜನೆಯನ್ನು ವೈಜ್ಞಾನಿಕವಾಗಿ ಸಿದ್ಧಪಡಿಸಿ ಆಡಳಿತ ಮಂಡಳಿ ಸಭೆಯಲ್ಲಿ ಕೂಲಂಕುಷವಾಗಿ ಚರ್ಚೆಯಾಗಿ ನಂತರ ವಾರ್ಷಿಕ ಸಭೆಗೆ ಅನುಮೋದನೆಗಾಗಿ ಮಂಡಿಸಬೇಕಾಗುತ್ತದೆ.

ವಾರ್ಷಿಕ ಕ್ರಿಯಾ ಯೋಜನೆ ಸಿದ್ಧಪಡಿಸುವಾಗ ಹಿಂದಿನ ವರ್ಷದ ಗುರಿ, ಸಾಧನೆ, ಕೊರತೆಗಳು, ಸಂಪನ್ಮೂಲಗಳ ಬಳಕೆ, ಉಳಿಕೆ ಹಾಗೂ ಕೊರತೆಗಳ ಬಗ್ಗೆ ಸುದೀರ್ಘ ಚರ್ಚೆಯಾಗಬೇಕು. ಮುಂಬರುವ ಯೋಜನೆಗಳ ಸಿದ್ಧಪಡಿಸುವಾಗ ಹಮ್ಮಿಕೊಳ್ಳಬಹುದಾದ ಯೋಜನೆಗಳು, ಅವುಗಳ ವ್ಯಾಪ್ತಿ, ಇದರಿಂದಾಗಿ ಸದಸ್ಯರಿಗೆ, ಸಹಕಾರಿಗೆ ಹಾಗೂ ಸಾರ್ವಜನಿಕರಿಗೆ ಆಗಬಹುದಾದ ಲಾಭಗಳು, ನಿರೀಕ್ಷಿಸಬಹುದಾದ ವೆಚ್ಚಗಳು, ಸಹಕಾರಿಯ ಪ್ರಸ್ತುತ ಸಂಪನ್ಮೂಲಗಳು, ಹೆಚ್ಚುವರಿ ಸಂಪನ್ಮೂಲಗಳ ಸಂಗ್ರಹಣೆಗೆ ಆಯ್ಕೆ ಮಾಡಿಕೊಳ್ಳಬಹುದಾದ ಕ್ಷೇತ್ರಗಳು, ನಿರೀಕ್ಷಿಸಬಹುದಾದ ಸಂಗ್ರಹಣೆ, ಲಭ್ಯವಿರುವ ಮಾನವ ಸಂಪನ್ಮೂಲಗಳು, ವಿನಿಯೋಗಿಸಬಹುದಾದ ವಿಧಾನಗಳು, ಯೋಜನೆಯ ಅನುಷ್ಠಾನದ ಹಂತಗಳು ಇವೆಲ್ಲವುಗಳ ಬಗ್ಗೆ ಸಮಗ್ರ ಚರ್ಚೆಯಾಗುವುದು ಅವಶ್ಯಕ.

ವಾರ್ಷಿಕ ಕ್ರಿಯಾ ಯೋಜನೆಗಳಲ್ಲಿ ಸಹಕಾರಿಗೆ ನಿವೇಶನ ಹೊಂದುವುದು, ಕಟ್ಟಡ ನಿರ್ಮಾಣ, ಶಾಖೆಗಳನ್ನು ಪ್ರಾರಂಭಿಸುವುದು, ಬಡ್ಡಿಯೇತರ ಆದಾಯಗಳ ಯೋಜನೆಗಳನ್ನು ಪ್ರಾರಂಭಿಸುವುದು, ಕಚೇರಿಯ ಆಧುನೀಕರಣ, ತಂತ್ರಜ್ಞಾನ ಅಳವಡಿಸುವುದು, ಸಿಬ್ಬಂದಿಗಳ ನೇಮಕಾತಿ, ಸದಸ್ಯರ ಉತ್ಪನ್ನಗಳ ಮಾರಾಟ, ವಿಮಾ ಕಂಪನಿಗಳ ಜೊತೆಗೆ ಟೈ–ಅಪ್ ಮಾಡಿಕೊಂಡು ಸದಸ್ಯರಿಗೆ ಹೆಚ್ಚಿನ ಸೇವೆಗಳನ್ನು ಒದಗಿಸುವುದು ಚಿಟ್ ವ್ಯವಹಾರ ಪ್ರಾರಂಭಿಸುವುದು ಹೀಗೆ ಇನ್ನೂ ಅನೇಕ ಯೋಜನೆಗಳನ್ನು ಜಾರಿ ಮಾಡುವಾಗ ಇವೆಲ್ಲವುಗಳನ್ನು ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಅಳವಡಿಸಿ ವಾರ್ಷಿಕ ಬಡ್ಜೆಟ್(ಆಯವ್ಯಯ)ದಲ್ಲಿಯೂ ನಮೂದಿಸುವುದು ಅಗತ್ಯ. ಎಲ್ಲ ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಶಿಕ್ಷಣ ತರಬೇತಿ ಹಾಗೂ ವ್ಯಾಪಕ ಪ್ರಚಾರವನ್ನು ಮಾಡುವುದು ಅಗತ್ಯ. ■



# ನೂತನ ಕೇಂದ್ರ ಸರ್ಕಾರದ ಬಜೆಟ್ ನಿರೀಕ್ಷೆಗಳು

- ತೆರಿಗೆ ವಿನಾಯ್ತಿ ಮಿತಿ ರೂ. 3.50 ಲಕ್ಷಕ್ಕೆ ಏರಿಕೆ.
- ರಕ್ಷಣಾ ಮತ್ತು ರೈಲ್ವೆ ಕ್ಷೇತ್ರದಲ್ಲಿ ವಿದೇಶಿ ನೇರ ಹೂಡಿಕೆಗೆ ಅವಕಾಶ.
- ಹಣಕಾಸು ಕ್ಷೇತ್ರದಲ್ಲಿ ಕೆಲವು ಸುಧಾರಣಾ ಕ್ರಮ.

ತೆರಿಗೆದಾರರ ಹೊರೆ ಕಡಿಮೆ ಮಾಡುವ ನಿಟ್ಟಿನಲ್ಲಿ ಚಿಂತಿಸಿರುವ ಕೇಂದ್ರ ಸರ್ಕಾರ, ವಾರ್ಷಿಕ ಉಳಿತಾಯ ಮೊತ್ತದ ಮೇಲೆ ನೀಡುವ ತೆರಿಗೆ ವಿನಾಯ್ತಿ ಮಿತಿಯನ್ನು ರೂ.3 ಲಕ್ಷಕ್ಕೆ ಏರಿಕೆ ಮಾಡುವ ಸಾಧ್ಯತೆ ಇದೆ. ಇದನ್ನು ಇದೇ 10ರಂದು ಮಂಡನೆ ಯಾಗಲಿರುವ ಬಜೆಟ್‌ನಲ್ಲಿ ಘೋಷಿಸುವ ನಿರೀಕ್ಷೆ ಇದೆ ಎಂದು ಮೂಲಗಳು ತಿಳಿಸಿವೆ.

ಸದ್ಯ ರೂ.1 ಲಕ್ಷದವರೆಗಿನ ವಾರ್ಷಿಕ ಉಳಿತಾಯಕ್ಕೆ ಆದಾಯ ತೆರಿಗೆ ಕಾಯ್ದೆಯ ಕಲಂಗಳಾದ 80ಸಿ, 80ಸಿಸಿ ಮತ್ತು 80ಸಿಸಿಸಿ ಅಡಿಯಲ್ಲಿ ತೆರಿಗೆ ವಿನಾಯ್ತಿ ಪಡೆಯಲು ಅವಕಾಶ ಇದೆ. ನೇರ ತೆರಿಗೆ ಸಂಹಿತೆ (ಡಿಟಿಸಿ) ಕೂಡ ತೆರಿಗೆ ವಿನಾಯ್ತಿ ಮಿತಿಯನ್ನು ವಾರ್ಷಿಕ ರೂ.1.5 ಲಕ್ಷಕ್ಕೆ ಹೆಚ್ಚಳ ಮಾಡಬೇಕು ಎಂದು ಶಿಫಾರಸು ಮಾಡಿದೆ.



ಕುಟುಂಬ ಸದಸ್ಯರ ಹೂಡಿಕೆ ಉತ್ತೇಜಿಸಲು ತೆರಿಗೆ ವಿನಾಯ್ತಿ ಮಿತಿ ಹೆಚ್ಚಿಸುವಂತೆ ಬ್ಯಾಂಕುಗಳು ಮತ್ತು ವಿಮಾ ಸಂಸ್ಥೆಗಳೂ ಸಹ ಹಣಕಾಸು ಸಚಿವಾಲಯಕ್ಕೆ ಮನವಿ ಮಾಡಿದ್ದವು.

ಜೀವ ವಿಮೆ ಕಂತು, ಸಾರ್ವಜನಿಕ ಭವಿಷ್ಯ ನಿಧಿ, ಕಾರ್ಮಿಕರ ಭವಿಷ್ಯ ನಿಧಿ, ರಾಷ್ಟ್ರೀಯ ಉಳಿತಾಯ ಪತ್ರಗಳು, ಗೃಹ ಸಾಲದ ಮರು ಪಾವತಿ, ಮ್ಯೂಚುವಲ್ ಫಂಡ್‌ಗಳ ಇಕ್ವಿಟಿ ಸಂಬಂಧಿಸಿದ ಷೇರು ಉಳಿತಾಯ ಯೋಜನೆಯಲ್ಲಿ ಹೂಡಿಕೆ ಮತ್ತು ಬ್ಯಾಂಕ್ ಗಳಲ್ಲಿ 5 ವರ್ಷಗಳವರೆಗಿನ ಉಳಿತಾಯ ಯೋಜನೆಗಳಿಗೆ ತೆರಿಗೆ ವಿನಾಯ್ತಿ ಇದೆ.

**ಸಾಮಾನ್ಯ ಬೇಡಿಕೆಗಳೇನು ?** : ಆದಾಯದ ಪ್ರಮಾಣ ಮತ್ತು ಹಣದುಬ್ಬರ ಗಣನೆಗೆ ತೆಗೆದುಕೊಂಡು ತೆರಿಗೆ ಮಿತಿಯನ್ನು ರೂ 3.50 ಲಕ್ಷಕ್ಕೆ ಹೆಚ್ಚಿಸಬೇಕು. ಹಿರಿಯ ನಾಗರಿಕರಿಗೆ ಹಾಲಿ ನೀಡಲಾಗಿರುವ ಮಿತಿಯನ್ನು ರು. 2.50 ಲಕ್ಷದಿಂದ ರೂ. 4 ಲಕ್ಷಕ್ಕೆ ಹೆಚ್ಚಿಸಬೇಕು. ಗೃಹ ನಿರ್ಮಾಣ ಮತ್ತು ಖರೀದಿ ವೆಚ್ಚ ಗಗನಕ್ಕೇರಿದೆ. ಹೀಗಾಗಿ ಸಾಲ ಮರು ಪಾವತಿಯಲ್ಲಿ ರೂ. 1 ಲಕ್ಷ ಉಳಿತಾಯ ಮತ್ತು ರೂ. 1.50 ಲಕ್ಷ ಒಟ್ಟು ಆದಾಯದಲ್ಲಿ ಕಡಿತ ಮಾಡಿ ತೆರಿಗೆ ವಿನಾಯಿತಿ ಮಾಡುವ ಪದ್ಧತಿ ಅರ್ಥ ಕಳೆದುಕೊಂಡಿದೆ. ಅದರ ಮಿತಿಯನ್ನು ರೂ. 3 ಲಕ್ಷಕ್ಕೆ ಏರಿಕೆ ಮಾಡಬೇಕು. ಇತ್ಯಾದಿ ನಿರೀಕ್ಷೆಗಳಿವೆ.

**ಹೂಡಿಕೆದಾರರ ನಿರೀಕ್ಷೆಗಳು** : ಬಜೆಟ್ ಹಿನ್ನೆಲೆಯಲ್ಲಿ ಷೇರುಪೇಟೆ ಹೂಡಿಕೆದಾರರು ಭಾರಿ ನಿರೀಕ್ಷೆಗಳನ್ನೇ ಇಟ್ಟುಕೊಂಡಿದ್ದಾರೆ. ಸರ್ಕಾರ ಬಜೆಟ್‌ನಲ್ಲಿ ಸಾಕಷ್ಟು ಆರ್ಥಿಕ ಸುಧಾರಣೆಯ ಕ್ರಮಗಳನ್ನು ಪ್ರಕಟಿಸಲಿದಲ್ಲಿ ದೇಶದ ಹಣಕಾಸು ಮಾರುಕಟ್ಟೆಗೆ ಶುಭಸೂಚಕ ವಾಗಿರಲಿದೆ ಎಂಬುದು ಹೂಡಿಕೆದಾರರ ಆಶಾವಾದ. ಮುಂಬೈ ಷೇರು ವಿನಿಮಯ ಕೇಂದ್ರ(ಬಿಎಸ್‌ಇ) ಮತ್ತು ರಾಷ್ಟ್ರೀಯ ಷೇರು ವಿನಿಮಯ ಕೇಂದ್ರ (ಎನ್‌ಎಸ್‌ಇ) ಸೂಚ್ಯಂಕಗಳು ಗಳಿಕೆಗೆ ಇನ್ನಷ್ಟು ಅಂಶಗಳ ಏರಿಕೆಯನ್ನು ಸೇರಿಸಲಿವೆ ಎಂಬುದು ತಜ್ಞರ ವಿಶ್ಲೇಷಣೆ. 'ಬಿಎಸ್‌ಇ' ಸಂವೇದಿ ಸೂಚ್ಯಂಕ ಕನಿಷ್ಠ 400ರಿಂದ 500 ಅಂಶಗಳಷ್ಟು ಗಳಿಕೆ ತೋರಲಿದೆ. 'ಎನ್‌ಎಸ್‌ಇ' ನಿಫ್ಟಿ ಸಹ ಏನಿಲ್ಲವೆಂದರೂ 150 ಅಂಶಗಳ ಸಾಧನೆ ಮಾಡಲಿದೆ ಎಂಬ ಮುನ್ನೋಟ ವ್ಯಕ್ತವಾಗಿದೆ.

**ವಿಭಿನ್ನ ವಿಶ್ಲೇಷಣೆ** : 'ಈ ಬಾರಿಯ ಬಜೆಟ್‌ನಲ್ಲಿ ರಕ್ಷಣಾ ಕ್ಷೇತ್ರ ಮತ್ತು ರೈಲ್ವೆ ವಲಯದಲ್ಲಿ ವಿದೇಶಿ ನೇರ ಹೂಡಿಕೆಗೆ ಅವಕಾಶ ಮಾಡಿಕೊಡುವ ನಿರೀಕ್ಷೆ ಇದೆ. ಹಣಕಾಸು ಕ್ಷೇತ್ರದಲ್ಲೂ ಹೊಸದಾಗಿ ಕೆಲವು ಸುಧಾರಣಾ ಕ್ರಮಗಳನ್ನು ಕೈಗೊಳ್ಳುವ ಸಾಧ್ಯತೆ ಇದೆ. ಈ ಅಂಶಗಳೇ ಷೇರುಪೇಟೆಯನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯಲಿವೆ' ಎಂದು 'ಷೇರು ದಲ್ಲಾಳಿಗಳು ದೊಡ್ಡ ಮಟ್ಟದ ಸುಧಾರಣೆಯ ಬಜೆಟ್‌ನ ನಿರೀಕ್ಷೆಯಲ್ಲಿದ್ದಾರೆ. ■

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿಯೋಗಕ್ಕೆ ಸಹಕಾರ ಸಚಿವ ಶ್ರೀ ಎಚ್.ಎಸ್.ಮಹದೇವಪ್ರಸಾದ್ ಭರವಸೆ

■ **ಸೌಹಾರ್ದ ಸಹಕಾರಿ ಕಾಯ್ದೆಗೆ ಅಗತ್ಯ ತಿದ್ದುಪಡಿ ಹಾಗೂ ಪ್ರತ್ಯೇಕ ನ್ಯಾಯಾಲಯ ಮಂಜೂರಿಗೆ ಒಪ್ಪಿಗೆ**



ದಿನಾಂಕ 13–6–2014 ಬೆಂಗಳೂರು : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರ ಹಾಗೂ ಉಪಾಧ್ಯಕ್ಷ ಶ್ರೀ ಹೆಚ್.ವಿ.ರಾಜೀವರವರುಗಳ ನೇತೃತ್ವದಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳ ನಿಯೋಗವು ರಾಜ್ಯದ ಸಹಕಾರ ಸಚಿವರಾದ ಶ್ರೀ ಹೆಚ್.ಎಸ್.ಮಹದೇವಪ್ರಸಾದರವರನ್ನು ವಿಧಾನಸೌಧದ ಅವರ ಕಚೇರಿಯಲ್ಲಿ ಭೇಟಿಮಾಡಲಾಯಿತು.

ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಗುರುನಾಥ ಜಾಂತಿಕರರವರು ಮಾತನಾಡಿ 97 ನೇ ಸಂವಿಧಾನ ತಿದ್ದುಪಡಿಗಳನ್ನು ಸೌಹಾರ್ದ ಸಹಕಾರಿ ಕಾಯ್ದೆಗೆ ಅಳವಡಿಸುವ ಸಂದರ್ಭದಲ್ಲಿ ಸೌಹಾರ್ದ ಸಹಕಾರಿಗಳ ಕಾರ್ಯಾಚರಣೆಯಲ್ಲಿ ಹಲವು ಆಡಳಿತಾತ್ಮಕ ತೊಂದರೆಗಳು ಆಗಿವೆ. ಇವುಗಳನ್ನು ಸರಿಪಡಿಸುವುದು ಸದ್ಯದ ಅತ್ಯಂತ ಮಹತ್ವದ ಬೇಡಿಕೆಯಾಗಿದೆ. ಸೌಹಾರ್ದ ಸಹಕಾರ ಕಾಯ್ದೆಗೆ ತಿದ್ದುಪಡಿ ಜಾರಿಮಾಡುವ ಸಂದರ್ಭದಲ್ಲಿ ಆಗಿರುವ ನ್ಯೂನತೆಗಳನ್ನು ಸರಿಪಡಿಸಿದರೆ ಮಾತ್ರ ಸೌಹಾರ್ದ ಸಹಕಾರಿ ಚಳುವಳಿಯನ್ನು ಹಾಗೂ ಸಂಯುಕ್ತ ಸಹಕಾರಿಯನ್ನು ಬಲಪಡಿಸಿದಂತಾಗುತ್ತದೆ.

ತಿದ್ದುಪಡಿಗಳನ್ನು ಮಾಡಿಕೊಡುವುದರ ಜೊತೆಗೆ ಸೌಹಾರ್ದ ಸಹಕಾರಿಗಳಲ್ಲಿಯ ವ್ಯಾಜ್ಯಗಳನ್ನು ಶೀಘ್ರದಲ್ಲಿ ಪರಿಹರಿಸುವುದಕ್ಕಾಗಿ ಪ್ರತ್ಯೇಕ ನ್ಯಾಯಾಲಯಗಳನ್ನು ಸ್ಥಾಪಿಸುವುದು ಅಗತ್ಯ. ಅದಕ್ಕಾಗಿ ಸೌಹಾರ್ದ ಸಹಕಾರಿಗಳಿಗಾಗಿ 2 ಪ್ರತ್ಯೇಕ ನ್ಯಾಯಾಲಯಗಳನ್ನು ಮಂಜೂರು ಮಾಡಿಕೊಡುವಂತೆ ವಿನಂತಿಸಿದರು.

ಇವುಗಳ ಜೊತೆಗೆ ಸೌಹಾರ್ದ ಸಹಕಾರಿಗಳಲ್ಲಿ ಸಹಸದಸ್ಯತ್ವಕ್ಕೆ ಅವಕಾಶವನ್ನು ಮರುಕಲ್ಪಿಸುವುದು, ನಾಮಮಾತ್ರ ಸದಸ್ಯತ್ವದಲ್ಲಿಯ ತೊಂದರೆಯನ್ನು ನಿವಾರಿಸುವುದು, ಪಟ್ಟಣ ಸಹಕಾರ ಬ್ಯಾಂಕುಗಳ ಶಾಖೆಗಳನ್ನು ತೆರೆಯುವ ವಿಧಾನದಲ್ಲಿ ಸರಳತೆ, ಮುಂದೂಡಿದ ಸಾಮಾನ್ಯ ಸಭೆಗೆ ಕೋರಂ, ಪದಾಧಿಕಾರಿಗಳ ಚುನಾವಣೆಗಳನ್ನು ಆಯಾ ಸೌಹಾರ್ದ ಸಹಕಾರಿಗಳಿಗೆ ಬಿಡುವುದು, ರಿಕ್ತತೆಯನ್ನು ತುಂಬುವುದು, ಸಹಕಾರಿಗಳ ಲೆಕ್ಕಪರಿಶೋಧನೆಯ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಗೆ ನಿರ್ದೇಶನ ಕೊಡುವ ಅಧಿಕಾರ ಕಲ್ಪಿಸುವುದು, ಪೂರಕ ಸಂಸ್ಥೆಗಳನ್ನು ಸ್ಥಾಪಿಸುವುದು, ಸಂಯುಕ್ತ ಸಹಕಾರಿಗೆ ಸಹಕಾರಿಗಳು ಮಾಹಿತಿ ಒದಗಿಸುವುದು, ಹೊಸ ಸೌಹಾರ್ದ ಸಹಕಾರಿಗಳ ನೋಂದಣಿಯಾದ ನಂತರ ಸಹಕಾರ ಇಲಾಖೆಯು ಶೀಘ್ರದಲ್ಲಿ ಸಂಯುಕ್ತ ಸಹಕಾರಿಗೆ ಮಾಹಿತಿ ನೀಡುವುದು, ನೋಂದಣಿಗೆ ಕಾಲಮಿತಿಯನ್ನು ನಿಗದಿಪಡಿಸುವುದು, ಸಂಯುಕ್ತ ಸಹಕಾರಿಯ ಸಿಬ್ಬಂದಿಯನ್ನು ಡೇಲಿಗೇಟ್ ಆಗುವುದನ್ನು ತಪ್ಪಿಸುವುದು ಇವುಗಳ ಬಗ್ಗೆ ಮಾನ್ಯ ಸಚಿವರಿಗೆ ಮನವರಿಕೆ ಮಾಡಿಕೊಡಲಾಯಿತು.

ಇವುಗಳ ಜೊತೆಗೆ ದಿ ಕರ್ನಾಟಕ ಅಗ್ರಿಕಲ್ಚರಲ್ ಮಾರ್ಕೆಟಿಂಗ್ ರೆಗುಲೇಶನ್ ಆ್ಯಕ್ಟ 1966ಗೆ ತಿದ್ದುಪಡಿ ಮಾಡಿ ಸೌಹಾರ್ದ ಸಹಕಾರಿಗಳಿಗೆ ಅನುಕೂಲ ಕಲ್ಪಿಸುವುದರ ಬಗ್ಗೆ ವಿನಂತಿಸಲಾಯಿತು.

ಮಾನ್ಯ ಸಹಕಾರ ಸಚಿವರು ಎಲ್ಲ ವಿಷಯಗಳನ್ನು ಸಮಾಧಾನವಾಗಿ ಕೇಳಿ ರಾಜ್ಯದ ಸೌಹಾರ್ದ ಸಹಕಾರ ಚಳುವಳಿಗೆ ಸರಕಾರ ಬದ್ಧವಾಗಿದೆ. ಸಂಯುಕ್ತ ಸಹಕಾರಿಯನ್ನು ಬಲಪಡಿಸಲು ಅಗತ್ಯ ಕ್ರಮಗಳನ್ನು ಸರಕಾರ ತೆಗೆದುಕೊಳ್ಳುತ್ತದೆ ಎಂದು ತಿಳಿಸಿದರು.

ನಿಯೋಗ ಮನವಿ ಸಲ್ಲಿಸುವ ಸಂದರ್ಭದಲ್ಲಿ ಕರ್ನಾಟಕ ಸರಕಾರದ ಮಾಹಿತಿ ಹಾಗೂ ತಂತ್ರಜ್ಞಾನ ಸಚಿವರಾದ ಮಾನ್ಯ ಶ್ರೀ ಎಸ್.ಆರ್.ಪಾಟೀಲರವರು, ವಿಧಾನ ಪರಿಷತ್ ಸದಸ್ಯ ಶ್ರೀ ಅರುಣ ಶಹಾಪುರ, ಮಾಜಿ ವಿಧಾನ ಪರಿಷತ ಸದಸ್ಯ ಹಾಗೂ ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರಾದ ಶ್ರೀ ಮನೋಹರ ಮಸ್ಕಿ, ಮಾಜಿ ಶಾಸಕ ಶ್ರೀ ಮಗೆಣ್ಣವರ್, ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರಾದ ಶ್ರೀ ವಿಶ್ವನಾಥ ಹಿರೇಮಠ್, ಸಹಕಾರ ಇಲಾಖೆಯ ಕಾರ್ಯದರ್ಶಿ ಡಾ॥ ಸಿ. ಸೋಮಶೇಖರ ಐಎಎಸ್, ಸಹಕಾರ ಸಂಘಗಳ ನಿಬಂಧಕರಾದ ಶ್ರೀ ಎನ್. ಎಸ್. ಚನ್ನಪ್ಪಗೌಡ ಐಎಎಸ್, ಇಲಾಖಾಧಿಕಾರಿಗಳು, ಸಂಯುಕ್ತ ಸಹಕಾರಿಯ ನಿರ್ದೇಶಕರುಗಳು ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳ ಹಾಗೂ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕುಗಳ ಅಧ್ಯಕ್ಷರುಗಳು, ಪ್ರತಿನಿಧಿಗಳು, ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಪಾಟೀಲ ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು. ■

# 'ಬ್ಯಾಂಕ್ ಪೈಪೋಟಿ ಮಧ್ಯೆ ಸಹಕಾರಿ ಸಂಸ್ಥೆಗಳ ಯಶಸ್ವಿ ಕಾರ್ಯನಿರ್ವಹಣೆ

## ಅಧಿಪ್ರೇರಣೆ ಹಾಗೂ ಗುಣಮಟ್ಟ ನಿರ್ವಹಣೆ ತರಬೇತಿಯಲ್ಲಿ – ಶ್ರೀ ಎಚ್.ವಿ.ರಾಜೀವ್

**ಉಡುಪಿ :** ಸರಕಾರದ ಯಶಸ್ವಿನಿ ಯೋಜನೆ ಸೇರಿದಂತೆ ನಾನಾ ಯೋಜನೆಗಳ ಅನುಷ್ಠಾನ, ಇ–ಸ್ಟಾಂಪಿಂಗ್ ಮೊದಲಾದ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿರುವ ಸೌಹಾರ್ದ ಸಹಕಾರಿ ಸಂಸ್ಥೆಗಳು ಸಾಮಾಜಿಕ ಜವಾಬ್ದಾರಿ ನಿರ್ವಹಿಸುವುದರಲ್ಲಿ ಮುಂಚೂಣಿಯಲ್ಲಿವೆ ಎಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಎಚ್.ವಿ. ರಾಜೀವ್ ತಿಳಿಸಿದರು.

ದಿನಾಂಕ : 10.06.2014ರಂದು ಕಿನ್ನಿಮುಲ್ಕಿಯ ಉಡುಪಿ ತಾಲೂಕು ಇಂಡಸ್ಟ್ರೀಯಲ್ ಕೋ–ಆಪರೇಟಿವ್ ಸೊಸೈಟಿಯ ಸಭಾಂಗಣದಲ್ಲಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಹಾಗೂ ಪತ್ತಿನ ಸಹಕಾರ ಸಂಘಗಳ ಅಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರಿಗಾಗಿ ಹಮ್ಮಿಕೊಂಡ ಅಧಿಪ್ರೇರಣೆ ಹಾಗೂ ಗುಣಮಟ್ಟ ನಿರ್ವಹಣೆ ತರಬೇತಿ ಹಾಗೂ ಸಹಕಾರ ಕುರಿತು ಸರಣಿ ಉಪನ್ಯಾಸ ಮಾಲಿಕೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ವಾಣಿಜ್ಯ ಬ್ಯಾಂಕುಗಳ ಪೈಪೋಟಿ ನಡುವೆಯೂ ಸಹಕಾರಿ ಸಂಸ್ಥೆಗಳು ಯಶಸ್ವಿಯಾಗಿ ಮುನ್ನಡೆಯುವಲ್ಲಿ ಸಹಕಾರಿಗಳಿಗೆ ಕಾಲಕಾಲಕ್ಕೆ ನೀಡಲಾಗುತ್ತಿರುವ ತರಬೇತಿ ಕಾರ್ಯಕ್ರಮಗಳ ಪಾತ್ರ ಮಹತ್ವದ್ದಾಗಿದೆ. ರಾಜ್ಯದಲ್ಲಿ ಹೊಸ ಸೌಹಾರ್ದ ಸಹಕಾರಿ ಕಾಯ್ದೆ ಅನುಷ್ಠಾನದಿಂದ ಬಾಹ್ಯ ಹಸ್ತಕ್ಷೇಪವಿಲ್ಲದೆ ಸಹಕಾರಿ ಸಂಸ್ಥೆಗಳು ಸ್ವಾಯತ್ತತೆಯಿಂದ ಮತ್ತಷ್ಟು ಉತ್ಸಾಹ, ಚೈತನ್ಯದಿಂದ ಕಾರ್ಯನಿರ್ವಹಿಸುವಂತಾಗಿದೆ. ರಾಜ್ಯದಲ್ಲಿ ಪ್ರತಿ ತಿಂಗಳಿಗೆ 15–20 ಸಹಕಾರಿ ಸಂಸ್ಥೆಗಳು ಹೊಸದಾಗಿ ಉದಯವಾಗುತ್ತಿವೆ. ನೋಂದಣಿಗೊಳ್ಳುತ್ತಿರುವ ಸಂಸ್ಥೆಗಳಲ್ಲಿ ಶೇ.50–60 ಸೌಹಾರ್ದ ಸಹಕಾರಿ ಸಂಸ್ಥೆಗಳಾಗಿವೆ. ಈ ಚಳವಳಿಯಿಂದಾಗಿ ಸುಮಾರು 20,000 ನೇರ ಉದ್ಯೋಗ ಹಾಗೂ ಅಷ್ಟೇ ಸಂಖ್ಯೆಯಲ್ಲಿ ಪರೋಕ್ಷ ಉದ್ಯೋಗ



ಸೃಷ್ಟಿಯಾಗಿದೆ ಎಂದು ಅವರು ವಿವರಿಸಿದರು.

ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷರಾದ ಶ್ರೀ ಕಿಶನ್‌ಹೆಗ್ಡೆ ಕೊಳ್ಕೆಬೈಲು ಮಾತನಾಡುತ್ತ ತರಬೇತಿ ಕಾರ್ಯಕ್ರಮಗಳು ಸಹಕಾರಿಗಳ ಜೀವಾಳ. ವಾಣಿಜ್ಯ ಕ್ಷೇತ್ರದಲ್ಲಿ ನಡೆಯುತ್ತಿರುವ ಕೆಲವು ದುರಂತಗಳಿಂದ ಸಹಕಾರಿಗಳು ಪಾಠ ಕಲಿಯಬೇಕಿದೆ ಎಂದರು.

ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಸ್ ಆರ್ ಸತೀಸಚಂದ್ರ ಅಧ್ಯಕ್ಷತೆಯನ್ನು ವಹಿಸಿದ್ದರು. ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಭಾಸ್ಕರ ಕಾಮತ್, ಸಹಕಾರ ಸಂಘಗಳ ಉಪನಿಬಂಧಕರಾದ ಶ್ರೀ ಆರ್.ಜೆ. ಕಾಂತರಾಜುರವರು ಮುಖ್ಯ ಅಥಿತಿಗಳಾಗಿ ಭಾಗವಹಿಸಿದ್ದರು.

ವಿಭಾಗೀಯ ಅಧಿಕಾರಿಗಳಾದ ಶ್ರೀ ಶಿವಕುಮಾರ ಬಿರಾದಾರ ಕಾರ್ಯಕ್ರಮ ನಿರ್ವಹಿಸಿದರೆ, ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ವೈ.ಕುಮಾರ ಪ್ರಸ್ತಾವಿಕ ಮತ್ತು ಸ್ವಾಗತ ಭಾಷಣವನ್ನು ಮಾಡಿದರು. ಕಾರ್ಯಕ್ರಮದಲ್ಲಿ ಉಡುಪಿ ಜಿಲ್ಲೆಯ 54 ಸೌಹಾರ್ದ ಸಹಕಾರಿಗಳಿಂದ 62 ಪ್ರತಿನಿಧಿಗಳು ಹಾಗೂ 13 ಪತ್ತಿನ ಸಹಕಾರ ಸಂಘಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

## ಸಂಯುಕ್ತ ಸಹಕಾರಿ ಅಧ್ಯಕ್ಷರಿಂದ ಪತ್ರಿಕಾಗೋಷ್ಠಿ

ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಗುರುನಾಥ ಜಾಂತಿಕರರವರು ದಿನಾಂಕ 24–6–2014 ರಂದು ಬೆಂಗಳೂರಿನ ಪ್ರೆಸ್ ಕ್ಲಬಿನಲ್ಲಿ ಸಂಯುಕ್ತ ಸಹಕಾರಿಯ ಚಟುವಟಿಕೆಗಳ, ಸೌಹಾರ್ದ ಸಹಕಾರಿ ಕ್ಷೇತ್ರದ ಸಾಧನೆಗಳ ಕುರಿತು ವಿವರಗಳನ್ನು ನೀಡುವುದರ ಜೊತೆಗೆ ದಿನಾಂಕ 13–6–2014 ರಂದು ಮಾನ್ಯ ಸಹಕಾರ ಸಚಿವರಲ್ಲಿ ನಿಯೋಗ ಹೋಗಿ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗಾಗಿ ಸಂಯುಕ್ತ ಸಹಕಾರಿಯನ್ನು ಬಲಪಡಿಸುವಂತಹ ಕಾರ್ಯವನ್ನು ಸರಕಾರ ತೆಗೆದುಕೊಳ್ಳಬೇಕು. ಸೌಹಾರ್ದ ಸಹಕಾರಿ ಕಾಯ್ದೆಯನ್ನು ತಿದ್ದುಪಡಿಮಾಡಿ ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯಾಚರಣೆಗೆ ಅನುಕೂಲ ಮಾಡಿಕೊಡಬೇಕು. ಸೌಹಾರ್ದ ಸಹಕಾರಿಗಳ ವ್ಯಾಜ್ಯಗಳ ಇತ್ಯರ್ಥಕ್ಕಾಗಿ ಪ್ರತ್ಯೇಕ ನ್ಯಾಯಾಲಯಗಳನ್ನು ಮಂಜೂರುಮಾಡಬೇಕು ಎಂದು ವಿನಂತಿಸಲಾಗಿದೆ. ಎಂದು ತಿಳಿಸಿದರು.

ಸಂಯುಕ್ತ ಸಹಕಾರಿಯು ಪ್ರಾರಂಭದಿಂದಲೂ ತನ್ನ ಶಾಸನಬದ್ಧ ಕಾರ್ಯಗಳನ್ನು ಯಶಸ್ವಿಯಾಗಿ ನಿರ್ವಹಿಸುತ್ತ ಬಂದಿದೆ. 1959ರ ಸಹಕಾರ ಸಂಘಗಳ ಕಾಯ್ದೆಯ ಕೆಲವು ಸಂಸ್ಥೆಗಳು ಇಲ್ಲಿ ಸ್ವೇಚ್ಛೆಯಿಂದ ಇರಬೇಕೆಂದು ಅಪೇಕ್ಷಿಸಿ ಈ ಕಾಯ್ದೆಯಡಿಯಲ್ಲಿ ಪರಿವರ್ತನೆಗೊಂಡು ನಂತರ ಸಂಯುಕ್ತ ಸಹಕಾರಿಯ ಕಟ್ಟುನಿಟ್ಟಿನ ಕ್ರಮಗಳಿಗೆ ಹೆದರಿ ಮತ್ತೆ 1959ರ ಕಾಯ್ದೆಗೆ ಮರುಪರಿವರ್ತನೆಯಾಗಿರುವ ಉದಾಹರಣೆ ಇವೆ. ಎಂದು ತಿಳಿಸಿದರು. ಇದೇ 11–7–2014 ರಂದು ಸಂಯುಕ್ತ ಸಹಕಾರಿಯ 13 ನೇ ವಾರ್ಷಿಕ ಸಾಮಾನ್ಯ ಸಭೆ ಬೆಂಗಳೂರಿನ ಸೆಂಟ್ರಲ್ ಕಾಲೇಜು ಆವರಣದ ಜ್ಞಾನಜ್ಯೋತಿ ಸಭಾಂಗಣದಲ್ಲಿ ಬೆಳಿಗ್ಗೆ 11–00 ಘಂಟೆಗೆ ಏರ್ಪಡಿಸಲಾಗಿದೆ ಎಂದು ತಿಳಿಸಿದರು. ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ.ಪಾಟೀಲ್ ಉಪಪ್ರಧಾನ ವ್ಯವಸ್ಥಾಪಕ ಶ್ರೀ ವೈ.ಕುಮಾರರವರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.



# 'ಸ್ಪರ್ಧಾತ್ಮಕವಾಗಿ ಕಾರ್ಯನಿರ್ವಹಿಸಿದರೆ ಮಾತ್ರ ಸಹಕಾರಿಗಳು ಅಸ್ತಿತ್ವ ಉಳಿಸಿಕೊಳ್ಳಲು ಸಾಧ್ಯ' – ಪ್ರವೇಶ ತರಬೇತಿಯಲ್ಲಿ ಶ್ರೀ ಸತೀಶ್ ಮರಾಠೆ



**ಮಂಗಳೂರು :** ಬದಲಾಗುತ್ತಿರುವ ಆರ್ಥಿಕ ವ್ಯವಸ್ಥೆಗೆ ತಕ್ಕಂತೆ ಸೌಹಾರ್ದ ಸಹಕಾರಿಗಳು ಸ್ಪರ್ಧಾತ್ಮಕವಾಗಿ ಕಾರ್ಯನಿರ್ವಹಿಸಿದರೆ ಮಾತ್ರ ಮಾತ್ರ ಅಸ್ತಿತ್ವ ಉಳಿಸಿಕೊಳ್ಳಲು ಸಾಧ್ಯ ಎಂದು ಸಹಕಾರ ಭಾರತಿಯ ರಾಷ್ಟ್ರೀಯ ಅಧ್ಯಕ್ಷ ಶ್ರೀ ಸತೀಶ್ ಮರಾಠೆ ಹೇಳಿದರು.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ವತಿಯಿಂದ ದಿನಾಂಕ 09.06. 2014ರಂದು ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ನೂತನ ಸೌಹಾರ್ದ ಸಹಕಾರಿ ಗಳಿಗೆ ಪ್ರವೇಶ ತರಬೇತಿ ಹಾಗೂ ಸಹಕಾರ ಕುರಿತು ಸರಣಿ ಉಪನ್ಯಾಸ ಮಾಲಿಕೆ ಕಾರ್ಯಕ್ರಮ ವನ್ನು ಮಂಗಳೂರು ನಗರದ ಕ್ಯಾಂಪ್ಕೋ ಸಭಾಂಗಣದಲ್ಲಿ ಉದ್ಘಾಟಿಸಿ ಅವರು ಮಾತನಾಡಿದರು.

ಕಳೆದ 20 ವರ್ಷದಿಂದ ಭಾರತದ ಆರ್ಥಿಕ ರಂಗದಲ್ಲಿ ಬಹಳಷ್ಟು ಬದಲಾವಣೆಗಳಾಗಿದ್ದು, ಗ್ರಾಮೀಣ ಪ್ರದೇಶದಲ್ಲಿರುವ ಸಹಕಾರಿಗಳು ಕೂಡಾ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿ ಅಂತಾರಾಷ್ಟ್ರೀಯ ಮಟ್ಟದ ಬ್ಯಾಂಕ್‌ಗಳ ಜತೆ ಸ್ಪರ್ಧೆ ನೀಡುವ ಅವಶ್ಯಕತೆ ಇದೆ ಎಂದು ಹೇಳಿದರು. ಕೇವಲ ಸಾಂಪ್ರದಾಯಿಕ ಬ್ಯಾಂಕ್ ಮತ್ತು ವಿಮಾ ಸಂಸ್ಥೆ ಜತೆ ಮಾತ್ರ ಸಹಕಾರಿ ಕ್ಷೇತ್ರ ಸ್ಪರ್ಧಿಸುತ್ತಿದ್ದರೆ, ಪ್ರಸ್ತುತ ಖಾಸಗಿ ಬ್ಯಾಂಕ್, ಷೇರು ಮಾರುಕಟ್ಟೆ, ಮ್ಯೂಚುವಲ್ ಫಂಡ್, ಖಾಸಗಿ ವಿಮಾ ಕ್ಷೇತ್ರ, ವಿದೇಶಿ ಹೂಡಿಕೆ ಮುಂತಾದವುಗಳನ್ನು ಕೂಡಾ ಗಮನಿಸಬೇಕಾಗಿದೆ ಎಂದು ಅವರು ತಿಳಿಸಿದರು. ಕೋರ್ ಬ್ಯಾಂಕಿಂಗ್ ವ್ಯವಸ್ಥೆ ಬಂದ ಬಳಿಕ ಹಿಂದೆ ಕ್ಯಾಶಲೆಸ್ ಆಗಿದ್ದ ಬ್ಯಾಂಕ್‌ಗಳೂ ಪ್ರಸ್ತುತ ಚೆಕ್‌ಲೆಸ್ ಆಗಿವೆ ಎಂದು ಹೇಳಿದ ಅವರು, ಅಂಚೆ ಇಲಾಖೆ ಕೂಡಾ ಕೋರ ಬ್ಯಾಂಕಿಂಗ್ ಅಳವಡಿಸಿ ಮುಂದೊಂದು ದಿನ ಭಾರತದ ಅತಿ ದೊಡ್ಡ ಬ್ಯಾಂಕ್ ಆಗಿ ಪರಿವರ್ತನಗೊಳ್ಳಲಿದೆ ಎಂದು ಅವರು ತಿಳಿಸಿದರು.

ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿರ್ದೇಶಕರಾದ ಶ್ರೀ ಎಸ್.ಆರ್. ಸತೀಸ್‌ಚಂದ್ರ ಅಧ್ಯಕ್ಷತೆ ವಹಿಸಿದ್ದರು. ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರ, ನಿರ್ದೇಶಕರಾದ ಶ್ರೀ ಭಾಸ್ಕರ ಕಾಮತ್, ಸಹಕಾರ ಸಂಘಗಳ ಉಪ ನಿಬಂಧಕರಾದ ಶ್ರೀ ಜಿ.ಆರ್.ವಿಜಯಕುಮಾರ, ಸಹಕಾರ ಸಂಘಗಳ ಅಪರ ನಿಬಂಧಕರಾದ (ನಿವೃತ್ತ) ಶ್ರೀ ಸಿ.ಎನ್.ಪರಶಿವಮೂರ್ತಿಯವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಉಪ ಪ್ರಧಾನ ವ್ಯವಸ್ಥಾಪಕರಾದ ಶ್ರೀ ವೈ.ಕುಮಾರ್ ಸ್ವಾಗತಿಸಿದರು. ಜಿಲ್ಲಾ ಸಹಕಾರ ಯೂನಿಯನ್ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಸಾವಿತ್ರಿ ರೈ ಪ್ರಾರ್ಥಿಸಿದರು. ವಿಭಾಗೀಯ ಅಧಿಕಾರಿ ಶ್ರೀ ಶಿವಕುಮಾರ ಬಿರಾದಾರ ಕಾರ್ಯಕ್ರಮ ನಿರೂಪಿಸಿದರು.

ನೂತನ ಸೌಹಾರ್ದ ಸಹಕಾರಿಗಳ ಪ್ರವೇಶ ತರಬೇತಿ ಕಾರ್ಯಕ್ರಮದಲ್ಲಿ ಮಂಗಳೂರು ಜಿಲ್ಲೆಯ 20 ಸೌಹಾರ್ದ ಸಹಕಾರಿಗಳಿಂದ 24 ಪ್ರತಿನಿಧಿಗಳು ಭಾಗವಹಿಸಿದ್ದರು.

"ಸಹಕಾರಿ ಕಾಯ್ದೆಗಳ ಆಶಯ ಸಹಕಾರ ಕ್ಷೇತ್ರದ ಸಾಧನೆ, ಸವಾಲುಗಳು ಹಾಗೂ ಅವಕಾಶಗಳು" ವಿಷಯ ಕುರಿತ ಉಪನ್ಯಾಸ ಕಾರ್ಯಕ್ರಮದಲ್ಲಿ 15 ಸೌಹಾರ್ದ ಸಹಕಾರಿಗಳ 18 ಪ್ರತಿನಿಧಿಗಳು ಭಾಗವಹಿಸಿದ್ದರು.



**ಶ್ರೀ ಮಹೇಂದ್ರ ಜೈನ್ ಐ.ಎ.ಎಸ್.**
ಸಹಕಾರ ಇಲಾಖೆಯ
ನೂತನ ಪ್ರಧಾನ ಕಾರ್ಯದರ್ಶಿ



**ಶ್ರೀ ಎಮ್.ವೆಂಕಟೇಶಗೌಡ**
ಸಹಕಾರಿ ಲೆಕ್ಕಪರಿಶೋಧನಾ ಇಲಾಖೆಯ
ನೂತನ ನಿರ್ದೇಶಕರು.



**ಶ್ರೀ ವೆಂಕಟಸ್ವಾಮಿ**
ನೂತನ ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಉಪಕಾರ್ಯದರ್ಶಿ ಸಹಕಾರ ಇಲಾಖೆ.

### 10 ದಿನಗಳ 11ನೇ ತಂಡದ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ ಮುಕ್ತಾಯ

# ತರಬೇತಿಯಿಂದ ಸಹಕಾರಿ ಕ್ಷೇತ್ರದ ಅಭಿವೃದ್ಧಿ ಸಾಧ್ಯ – ಶ್ರೀ ಮುರುಗೇಶ ನಿರಾಣಿ



ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಬೆಂಗಳೂರಿನ ಪದ್ಮನಾಭನಗರದಲ್ಲಿರುವ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ಸಭಾಂಗಣದಲ್ಲಿ ದಿನಾಂಕ 2-06-2014 ರಿಂದ 11-06-2014 ರವರೆಗೆ 10 ದಿನಗಳ ಅವಧಿಯ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮವನ್ನು ರಾಜ್ಯದ ಸೌಹಾರ್ದ ಸಹಕಾರಿಗಳ ಅಧಿಕಾರಿ/ಸಿಬ್ಬಂದಿಯವರಿಗಾಗಿ ಏರ್ಪಡಿಸಲಾಗಿತ್ತು.

ಈ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ರಾಜ್ಯದ ಮಾಜಿ ಕೈಗಾರಿಕಾ ಸಚಿವ ಶ್ರೀ ಮುರುಗೇಶ ನಿರಾಣಿಯವರು ಸಹಕಾರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರತಿಯೊಬ್ಬರಿಗೂ ಈ ರೀತಿಯ ತರಬೇತಿ ಅವಶ್ಯಕವಾಗಿದೆ. ವಿಶೇಷವಾಗಿ ಸಿಬ್ಬಂದಿಯವರಿಗೆ ಇಂತಹ ತರಬೇತಿ ಕಾರ್ಯಕ್ರಮ ನಿರಂತರವಾಗಿ ನಡೆಯಲೇಬೇಕು. ತರಬೇತಿಯಿಂದ ಸಿಬ್ಬಂದಿಯವರಲ್ಲಿ ಜ್ಞಾನದ ಮಟ್ಟ ಹೆಚ್ಚುತ್ತದೆ. ಕ್ರಿಯಾಶೀಲತೆ ಹೆಚ್ಚುತ್ತದೆ. ಅವರುಗಳ ಕಾರ್ಯಕ್ಷಮತೆ ಹೆಚ್ಚುತ್ತದೆ. ಹೀಗಾಗಿ ಸಹಕಾರಿ ಕ್ಷೇತ್ರ ಬಲಿಷ್ಠವಾಗಿ ಕಾರ್ಯ ನಿರ್ವಹಿಸಲು ಸಾಧ್ಯವಾಗುತ್ತದೆ.

ರಾಜ್ಯದ ಸೌಹಾರ್ದ ಸಂಯುಕ್ತ ಸಹಕಾರಿಯು ಇಂತಹ ಕಾರ್ಯಕ್ರಮಗಳನ್ನು ನಿರಂತರವಾಗಿ ಪರಿಣಾಮಕಾರಿಯಾಗಿ ನಡೆಸುತ್ತಿರುವುದು ಶ್ಲಾಘನೀಯ ಎಂದು ತಿಳಿಸಿದರು.

## ತರಬೇತಿಯ ವೈಶಿಷ್ಟತೆ

ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ.ಪಾಟೀಲರವರು ಪ್ರಾಸ್ತಾವಿಕವಾಗಿ ಮಾತನಾಡಿ ಶಿಬಿರದ ವರದಿಯನ್ನು ಸಭೆಗೆ ತಿಳಿಸುತ್ತ ಇದು ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ ಏರ್ಪಡಿಸಿದ 11ನೇಯ ತಂಡದ ವ್ಯಕ್ತಿತ್ವ ವಿಕಸನ ತರಬೇತಿಯಾಗಿದೆ.

ಈ ತಂಡದಲ್ಲಿ ರಾಜ್ಯದ 20 ಜಿಲ್ಲೆಗಳಿಂದ 55 ಸೌಹಾರ್ದ ಸಹಕಾರಿಗಳ 72 ಸಿಬ್ಬಂದಿಯವರು ಭಾಗವಹಿಸಿ ಪ್ರಯೋಜನ ಪಡೆದಿರುತ್ತಾರೆ ಬೆಳಗ್ಗೆ ಯೋಗ ಕಾರ್ಯಕ್ರಮದಿಂದ ಪ್ರಾರಂಭವಾಗುವ ತರಬೇತಿ ಕಾರ್ಯಕ್ರಮಗಳು ವಿವಿಧ ವಿಷಯಗಳ ಬಗ್ಗೆ ನುರಿತ ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸಗಳು, ಸಂಜೆ ವ್ಯಕ್ತಿತ್ವ ವಿಕಸನಕ್ಕೆ ಸಂಬಂಧಿಸಿದ ಇತರೆ ವಿಷಯಗಳಾದ ಆರೋಗ್ಯ ಮತ್ತು ಆಹಾರ ಪದ್ಧತಿಗಳು, ಅಧ್ಯಾತ್ಮ ಹಾಗೂ ಆರೋಗ್ಯ, ಹಾಸ್ಯ ಹಾಗೂ ಆರೋಗ್ಯ ಮತ್ತು ಅನೌಪಚಾರಿಕ ಸಭೆಗಳು ಹಾಗೂ ಮನರಂಜನೆ ಕಾರ್ಯಕ್ರಮಗಳೊಂದಿಗೆ ಮುಕ್ತಾಯವಾಗುವುದು ಮತ್ತು ಆಡಳಿತ ಮಂಡಳಿ ಸಭೆ ಬಗ್ಗೆ ಪ್ರಾಯೋಗಿಕ, ಲೆಕ್ಕಪತ್ರಗಳ ಸಿದ್ಧತೆ ಬಗ್ಗೆ ಪ್ರಾಯೋಗಿಕ, ವಾರ್ಷಿಕ ಕ್ರಿಯಾ ಯೋಜನೆ ಸಿದ್ಧಪಡಿಸುವ ಬಗ್ಗೆ ಪ್ರಾಯೋಗಿಕ, ಯಶಸ್ವಿ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಾಹಕರೊಂದಿಗೆ ಸಂವಾದದಲ್ಲಿ ಗುಲ್ಬರ್ಗಾ ಮಹಿಳಾ ಸೌಹಾರ್ದ ಸಹಕಾರಿ ನಿ., ಗುಲಬರ್ಗಾ – ಶ್ರೀ ಶೈಲಜಾ ತಪಲಿ ಅಧ್ಯಕ್ಷರು, ಉದಯ ಸೌಹಾರ್ದ ಪತ್ತಿನ ಸಹಕಾರಿ ನಿ., ಬೆಂಗಳೂರು – ಶ್ರೀ ಗುಂಡೂರಾವ್, ಅಧ್ಯಕ್ಷರು, ತುಮಕೂರು ಮರ್ಚೆಂಟ್ಸ್ ಸೌಹಾರ್ದ ಸಹಕಾರಿ ನಿ., – ಶ್ರೀ ಎನ್.ಎಸ್.ಜಯಕುಮಾರ ಅಧ್ಯಕ್ಷರು ಸರಸ್ವತಿ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಶ್ರೀ ಎಸ್.ಆರ್.ಸತೀಶ್ಚಂದ್ರ, ಅಧ್ಯಕ್ಷರು ಮತ್ತು ಶ್ರೀ ವಸಂತ್, ಮುಖ್ಯಕಾರ್ಯನಿರ್ವಾಹಣಾಧಿಕಾರಿ, ಸಿದ್ಧಸಿರಿ ಸೌಹಾರ್ದ ಪತ್ತಿನ ಸಹಕಾರಿ ನಿ., ಬಿಜಾಪುರ – ಶ್ರೀ ಶಂಕರಗೌಡ ಪಾಟೀಲ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ, ಭ್ರಮರಾಂಬ ಪತ್ತಿನ ಸೌಹಾರ್ದ ಸಹಕಾರಿ ನಿ., ಮಸ್ಕಿ – ಶ್ರೀ ವೀರೇಶ್ ಹಿರೇಮಠ, ಮುಖ್ಯಕಾರ್ಯನಿರ್ವಾಹಕ ಹಾಗೂ ದಿ ಪಾವಗಡ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಕೋಲಾರ – ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ಅಧ್ಯಕ್ಷರು ಭಾಗವಹಿಸಿ ತಮ್ಮ ಸಂಸ್ಥೆಗಳ ಪ್ರಗತಿಯ ವಿವರ ನೀಡುವುದರೊಂದಿಗೆ ಶಿಬಿರಾರ್ಥಿಗಳು ಪ್ರತಿನಿಧಿಸಿದ ಸಹಕಾರಿಗಳ ಅಭಿವೃದ್ಧಿಗೆ ಮಾರ್ಗದರ್ಶನ ಮಾಡಿದರು. ಹಾಗೂ ಉತ್ತಮ ಸಹಕಾರಿ ಸಂಸ್ಥೆಗಳ ಕಾರ್ಯಚಟುವಟಿಕೆಗಳನ್ನು ಅಧ್ಯಯನ ಮಾಡುವುದಕ್ಕಾಗಿ ಮಹಾಯೋಗಿ ವೇಮನ ಸೌಹಾರ್ದ ಸಹಕಾರಿ ಯಲಹಂಕ, ರೈತ ಸೇವಾ ಸಹಕಾರ ಸಂಘ ಸಿಂಗನಾಯಕನಹಳ್ಳಿ, ಕೆ.ಎಮ್.ಎಫ್ ಮದರ ಡೈರಿ ಭೇಟಿ ನೀಡಿರುವುದು ಈ ತರಬೇತಿಯ ವೈಶಿಷ್ಟತೆ ಎಂದು ತಿಳಿಸಿದರು.

# ಸೌಹಾರ್ದ ಸಹಕಾರಿ ಕ್ಷೇತ್ರ ರಾಜ್ಯದ ಸಹಕಾರಿ ಕ್ಷೇತ್ರದಲ್ಲಿ ಸಂಚಲನ ಮೂಡಿಸಿದೆ – ಶ್ರೀ ಗುರುನಾಥ ಜಾಂತಿಕರ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಬೆಂಗಳೂರಿನ ಪದ್ಮನಾಭನಗರದಲ್ಲಿರುವ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ಸಭಾಂಗಣದಲ್ಲಿ ದಿನಾಂಕ 2-06-2014 ರಿಂದ 11-06-2014 ರವರೆಗೆ 10 ದಿನಗಳ ಅವಧಿಯ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಗುರುನಾಥ ಜಾಂತಿಕರರವರು ಮಾತನಾಡಿ ರಾಜ್ಯದಲ್ಲಿ 2001 ರಿಂದ ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ಬಂದಿದೆ ಎಂದರು.



ಇದುವರೆಗೆ 2890ಕ್ಕಿಂತಲೂ ಹೆಚ್ಚು ಸೌಹಾರ್ದ ಸಹಕಾರಿಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ಬಂದನಂತರ ರಾಜ್ಯದ ಸಹಕಾರಿ ಕ್ಷೇತ್ರದಲ್ಲಿ ಒಂದು ರೀತಿಯ ಸಂಚಲನ ಮೂಡಿದಂತಾಗಿದೆ. ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರೀಯೆ ಬರುತ್ತಿದೆ. ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆ ವೇಗವಾಗಿದೆ. ಇಂತಹ ಸನ್ನಿವೇಶದಲ್ಲಿ ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳ ಗುಣಮಟ್ಟವನ್ನು ಹೆಚ್ಚಿಸುವ ದೃಷ್ಟಿಯಿಂದ ಹಲವು ವಿಧವಾದ ತರಬೇತಿ ಕಾರ್ಯಕ್ರಮಗಳನ್ನು ಸಂಯುಕ್ತ ಸಹಕಾರಿಯು ಹಮ್ಮಿಕೊಳ್ಳುತ್ತಿದೆ.

ಅದರಲ್ಲಿ ಸಿಬ್ಬಂದಿಯವರಿಗಾಗಿ ಪ್ರತಿ 6 ತಿಂಗಳಿಗೊಮ್ಮೆ 10 ದಿನಗಳ ಅವಧಿಯ ವ್ಯಕ್ತಿತ್ವ ವಿಕಸನ ತರಬೇತಿ ಅತ್ಯಂತ ಮಹತ್ವದ್ದಾಗಿದೆ. ಇದರಲ್ಲಿ ಸೌಹಾರ್ದ ಸಹಕಾರಿ ಕಾಯ್ದೆಯ ಮುಖ್ಯಾಂಶಗಳು, ಲೆಕ್ಕಪತ್ರಗಳ ವ್ಯವಸ್ಥೆ, ಆಡಳಿತ ವ್ಯವಸ್ಥೆ,ಸಭೆಗಳ ನಿರ್ವಹಣೆ, ಲೆಕ್ಕಪರಿಶೋಧನೆ, ಆದಾಯ ತೆರಿಗೆ ಕಾಯ್ದೆ ಹಾಗೂ ಸಂಬಂಧಿಸಿದ ಇತರೆ ಕಾನೂನುಗಳ ಮುಖ್ಯಾಂಶಗಳು, ಮಾನವೀಯ ಮೌಲ್ಯಗಳು, ಆಂತರಿಕ ಸಂಬಂಧಗಳ ನಿರ್ವಹಣೆ, ಗ್ರಾಹಕ ಸೇವೆಗಳ ನಿರ್ವಹಣೆ, ವ್ಯಕ್ತಿತ್ವ ವಿಕಸನ, ಮುಂತಾದ ವಿಷಯಗಳಲ್ಲದೆ ಯೋಗ, ಆರೋಗ್ಯ, ಅಧ್ಯಾತ್ಮ, ಮನರಂಜನೆಗಳು ಮತ್ತು ಹಲವು ಪ್ರಾಯೋಗಿಕಗಳು ಮತ್ತು ಅಧ್ಯಯನ ಪ್ರವಾಸಗಳನ್ನು ಏರ್ಪಡಿಸಿ ಸಿಬ್ಬಂದಿಯವರ ಜ್ಞಾನದ ಮಟ್ಟವನ್ನು ಹೆಚ್ಚಿಸುವ ಪ್ರಯತ್ನ ಇದಾಗಿದೆ ಎಂದು ತಿಳಿಸಿ ಇದು 11 ನೇ ತಂಡದ ಕಾರ್ಯಕ್ರಮ ಎಂದು ತಿಳಿಸಿದರು.

### ಸಂಯುಕ್ತ ಸಹಕಾರಿಯ 13ನೇ ವಾರ್ಷಿಕ ಸಾಮಾನ್ಯ ಸಭೆ

ಸಂಯುಕ್ತ ಸಹಕಾರಿಯ 13ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ : 11-7-2014ರಂದು ಬೆಂಗಳೂರು ಮೈಸೂರು ಬ್ಯಾಂಕ್ ವೃತ್ತದ ಹತ್ತಿರವಿರುವ ಸೆಂಟ್ರಲ್ ಕಾಲೇಜ್ ಆವರಣದಲ್ಲಿರುವ ಜ್ಞಾನಜ್ಯೋತಿ ಸಭಾಂಗಣದಲ್ಲಿ ಬೆಳಗ್ಗೆ 11-00 ಘಂಟೆಗೆ ನಡೆಸಲಾಗುವುದು. ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ಈ ವಿಷಯವನ್ನು ಗಮನಿಸಲು ಕೋರಿದೆ.

ಸಾಮಾನ್ಯ ಸಭೆ ಮುಗಿದ ನಂತರ 'ತಂತ್ರಜ್ಞಾನ ಮೇಳ' ಹಾಗೂ "ಸಹಕಾರಿ ಕ್ಷೇತ್ರದ ಪ್ರಗತಿಗಾಗಿ ಪರಿಣಾಮಕಾರಿ ನಾಯಕತ್ವ" ಎಂಬ ವಿಷಯದ ಬಗ್ಗೆ ಉಪನ್ಯಾಸವನ್ನು ಏರ್ಪಡಿಸಲಾಗಿದೆ.

# ಸಿಬ್ಬಂದಿಯವರ ವ್ಯಕ್ತಿತ್ವದಲ್ಲಿ ಸಕಾರಾತ್ಮಕ ಬೆಳವಣಿಗೆಗೆ ಈ ತರಬೇತಿ ಅಗತ್ಯ – ಶ್ರೀ ಅರುಣ ಶಹಾಪುರ

ಸಮಾರೋಪ ಭಾಷಣ ಮಾಡಿದ ವಿಧಾನ ಪರಿಷತ್ ಸದಸ್ಯ ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಅರುಣ ಶಹಾಪುರರವರು ಮಾತನಾಡಿ ಪ್ರತಿಯೊಬ್ಬರ ಜೀವನ ಶೈಲಿ ಸುಧಾರಣೆಗೆ ತರಬೇತಿಗಳು ಅಗತ್ಯ. ಇದನ್ನು ಚೆನ್ನಾಗಿ ಅರಿತುಕೊಂಡು ಕಂಪನಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವ್ಯವಸ್ಥಾಪಕ ನಿರ್ದೇಶಕರಿಗೆ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಅವರ ಜೀವ ಪರಿಯಂತ ಸೇವಾ ಅವಧಿ ಮುಗಿಯುವ ವರೆವಿಗೂ ತರಬೇತಿಗಳನ್ನು ನಡೆಸುತ್ತಿರುವುದನ್ನು ನಾವೆಲ್ಲ ಗಮನಿಸುತ್ತಿದ್ದೇವೆ. ಅದೇ ರೀತಿಯಲ್ಲಿ ಸಹಕಾರಿ ಕ್ಷೇತ್ರದಲ್ಲೂ ಈ ಕಾರ್ಯ ನಿರಂತರ ವಾಗಿ ನಡೆಯಬೇಕು. ರಾಜ್ಯದ ಸೌಹಾರ್ದ ಸಂಯುಕ್ತ ಸಹಕಾರಿಯು ಈ ನಿಟ್ಟಿನಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ಉತ್ತಮ ತರಬೇತಿ ಶಿಬಿರಗಳನ್ನು ಸಂಘಟಿಸಿ ಶಿಸ್ತು ಬದ್ಧತೆಯಿಂದ ಪರಿಣಾಮಕಾರಿಯಾಗಿ ನಡೆಸಿಕೊಂಡು ಬರುತ್ತಿರುವುದು ಶ್ಲಾಘನೀಯ ಹಾಗೂ ಇತರೆ ಸಂಸ್ಥೆಗಳಿಗೆ ಮಾದರಿ ಹಾಗೂ ಅನುಕರಣೀಯವಾಗಿದೆ ಎಂದು ತಿಳಿಸಿದರು.




ಶಿಬಿರಾರ್ಥಿಗಳಿಗೆ ಪ್ರಶಸ್ತಿ ವಿತರಣೆ

**ಪ್ರಶಸ್ತಿ ಪತ್ರ ವಿತರಣೆ :** ಶ್ರೀ ಬಿ.ಆರ್. ಓಂಪ್ರಕಾಶ ಸಹಕಾರ ಸಂಘಗಳ ಅಪರನಿಬಂಧಕರು ಹಾಗೂ ಸಮಾರಂಭದಲ್ಲಿ ಭಾಗವಹಿಸಿದ ಗಣ್ಯರು ಶಿಬಿರಾರ್ಥಿಗಳಿಗೆ ಪ್ರಶಸ್ತಿ ಪತ್ರಗಳನ್ನು ವಿತರಿಸಿದರು.

**ಬಹುಮಾನ ವಿತರಣೆ :** ಉತ್ತಮ ವರದಿ ಸಲ್ಲಿಸಿದ ತಂಡಗಳ ಹೆಸರು – ಸಂಗಮ, ಉತ್ತಮ ಪ್ರಾಯೋಗಿಕ 1 – ಸೌಗಂಧಿಕ, ಉತ್ತಮ ಪ್ರಾಯೋಗಿಕ – 2 – ಸನ್‌ಪ್ಲವರ್, ಉತ್ತಮ ಪ್ರಾಯೋಗಿಕ – 3 – ಕೃಷ್ಣ, ಉತ್ತಮ ಪ್ರಾರ್ಥನೆ – ಜಯಂತ್ ಮತ್ತು ಅರ್ಚನಾ, ಉತ್ತಮ ಮಿಲಿ – ಕಿರಣ್ ಕುಮಾರ್ ಮತ್ತು ಆಶಾ, ಉತ್ತಮ ಸುವಿಚಾರ – ಬಸವರಾಜ್ ಕೆ. ಮತ್ತು ಅನುಸೂಯ, ಉತ್ತಮ ಇನ್ಸ್ಟಂಟ್ ಮಿಲಿ – ಅರ್ಜುನ್ ಮತ್ತು ಶಬನಮ್

**ಉತ್ತಮ ಶಿಬಿರಾರ್ಥಿ ಮಹಿಳಾ ವಿಭಾಗ :** ರೂಪ ಮತ್ತು ಗೀತಾ ಕರೆಗೌಡರ್.

**ಉತ್ತಮ ಶಿಬಿರಾರ್ಥಿ ಪುರುಷ ವಿಭಾಗ :** ಎಂ.ಎಂ.ಪೂಜಾರಿ ಮತ್ತು ನಾಗೇಶ ಗುಪ್ತ

ಎಲ್ಲಾ ವಿಭಾಗದಲ್ಲೂ ಅತ್ಯುತ್ತಮವಾಗಿ ಹಾಗೂ ಚುರುಕಾಗಿ ಭಾಗವಹಿಸಿದ ಶಿಬಿರಾರ್ಥಿ – ಜಯಂತ್

ವಿವಿಧ ಕಾರ್ಯಚಟುವಟಿಕೆಗಳಲ್ಲಿ ಭಾಗವಹಿಸಿದ ಶಿಬಿರಾರ್ಥಿಗಳಿಗೆ ಬಹುಮಾನಗಳನ್ನು ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಶ್ರೀ ಮುರುಗೇಶ ನಿರಾಣಿ ಹಾಗೂ ಸಮಾರಂಭದ ಅಧ್ಯಕ್ಷ ಶ್ರೀ ಗುರುನಾಥ ಜಾಂತಿಕರ್ ರವರು ವಿತರಿಸಿದರು. ಇವರೊಂದಿಗೆ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷ ಶ್ರೀ ಹೆಚ್.ವಿ.ರಾಜೀವ, ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ನಿರ್ದೇಶಕ ಶ್ರೀ ಬಿ.ವಸಂತ ನಾಯಕ, ಹೊಸ ದಿಗಂತ ಪತ್ರಿಕೆ ಸಂಪಾದಕ ಶ್ರೀ ಶಾಂತಾರಾಮರವರು, ಸಂಯುಕ್ತ ಸಹಕಾರಿಯ ನಿರ್ದೇಶಕಿಯರಾದ ಶ್ರೀಮತಿ ಮಂಜುಳಾ ಪಾಟೀಲ್, ಶ್ರೀಮತಿ ಹೆಚ್.ಸಿ.ನಾಗರತ್ನ, ನಿರ್ದೇಶಕರಾದ ಶ್ರೀ ಎಸ್.ಆರ್.ಸತೀಶಚಂದ್ರ, ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ಶ್ರೀ ಭಾಸ್ಕರ ಹೆಗಡೆ ಕಾಗೇರಿ, ಶ್ರೀ ವೈಟಿ.ಪಾಟೀಲ, ಶ್ರೀ ರವಿ ಎಲೆಗಾರ, ಶ್ರೀ ಎಲ್.ಆನಂದರವರು ಸಹಕರಿಸಿದರು.




ಪ್ರಾಯೋಗಿಕದಲ್ಲಿ ಶಿಬಿರಾರ್ಥಿಗಳು



ಯೋಗಾಭ್ಯಾಸದಲ್ಲಿ ಶಿಬಿರಾರ್ಥಿಗಳು



ಕೆ.ಎಂ.ಎಫ್. ಮದರ್ ಡೈರಿಗೆ ಭೇಟಿ



ಸಂಯುಕ್ತ ಸಹಕಾರಿ ಆಡಳಿತಮಂಡಳಿಯವರೊಂದಿಗೆ ಶಿಬಿರಾರ್ಥಿಗಳು



ಮಹಾಯೋಗಿ ವೇಮನ ಸೌಹಾರ್ದ ಸಹಕಾರಿಗೆ ಭೇಟಿ



ಸಿಂಗನಾಯಕನಹಳ್ಳಿ ಸಹಕಾರಿಗೆ ಭೇಟಿ





ಶಿಬಿರಾರ್ಥಿಗಳಿಂದ ಮನರಂಜನಾ ಕಾರ್ಯಕ್ರಮ

## ಶಿಬಿರಾರ್ಥಿಗಳ ಅನಿಸಿಕೆಗಳು :

ತರಬೇತಿ ಕಾರ್ಯಕ್ರಮ ನಮ್ಮಲ್ಲಿ ಹೆಚ್ಚಿನ ಉತ್ಸಾಹ ಮೂಡಿಸಿದೆ. ನಮಗೆ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗುವ ಜ್ಞಾನವನ್ನು ನೀಡಿದೆ. ಸಹಕಾರ ಕ್ಷೇತ್ರದ ವ್ಯಾಪ್ತಿಯ ಬಗ್ಗೆ, ಸಭೆ ಸಮಾರಂಭಗಳ ನಿರ್ವಹಣೆ, ಸಭೆಗಳಲ್ಲಿ ಮಾತನಾಡುವುದು, ಸಾರ್ವಜನಿಕರೊಂದಿಗೆ ವ್ಯವಹರಿಸುವ ವಿಧಾನಗಳು. ಆರೋಗ್ಯ ಹಾಗೂ ಸಮಯ ಪಾಲನೆಗೆ ಹೆಚ್ಚು ಒತ್ತು ನೀಡುವುದು ಸದಾಕಾಲವು ಕ್ರೀಯಾಶಿಲತೆಯನ್ನು ರೂಢಿಸಿಕೊಳ್ಳುವುದರ ಬಗ್ಗೆ ನಮಗೆ ಸಹಕಾರಿಯಾಗಿದೆ.

ಅತ್ಯುತ್ತಮ ಹಾಗೂ ಪರಿಣಾಮಕಾರಿ ವೃತ್ತಿಪರ ತರಬೇತಿಯಾಗಿತ್ತು. ಸಹಕಾರಿಯ ಪ್ರತಿಯೊಬ್ಬ ನೌಕರರಿಗೆ ಇದು ಅವಶ್ಯಕ ತರಬೇತಿ ಎಂದು ಶಿಬಿರಾರ್ಥಿಗಳು ತಮ್ಮ ಅಭಿಪ್ರಾಯ ವ್ಯಕ್ತ ಪಡಿಸಿದರು.

# ಮಯೂರ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ನಿಯಮಿತದ ವಾರ್ಷಿಕ ಸಾಮಾನ್ಯ ಸಭೆ




ಕೌಶಲ್ಯ ನಿರ್ಮಾಣದಿಂದ ದೇಶದ ಏಳಿಗೆ ಸಾಧ್ಯ ಎಂಬ ಪ್ರಧಾನ ಮಂತ್ರಿಯವರ ಹೇಳಿಕೆಗೆ ಪೂರಕವಾಗಿ ಆಹಾರ ಸಂಸ್ಕರಣ, ಉಡುಪು ವಿನ್ಯಾಸ, ಗೃಹ ನಿರ್ಮಾಣ ಕಾರ್ಯದಲ್ಲಿ ತೊಡಗಿಸಿಕೊಳ್ಳುವ ಕುಶಲಕರ್ಮಿಗಳಿಗೆ ನಮ್ಮ ಸಹಕಾರಿಯು ಸಾಲ ಸೌಲಭ್ಯ ಒದಗಿಸಲು ಸಿದ್ಧ ಎಂದು ದಿನಾಂಕ : 21-06-2014ರಂದು ಸಾಗರದಲ್ಲಿ ನಡೆದ ಮಯೂರ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ.ನ ವಾರ್ಷಿಕ ಮಹಾಸಭೆಯಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಮ್.ಎಸ್.ವೆಂಕಟೇಶ್ ಇವರು ತಿಳಿಸಿದರು.

ಪ್ರಸಕ್ತ ಸಾಲಿನಲ್ಲಿ ರೂ. 86 ಲಕ್ಷ ನಿವ್ವಳ ಲಾಭ ಗಳಿಸಿರುತ್ತದೆ. ಹಾಗಾಗಿ ಈ ವರ್ಷ ಶೇ. 15ರಷ್ಟು ಲಾಭಾಂಶವನ್ನು ವಿತರಿಸಲು ಸಭೆಯಲ್ಲಿ ನಿರ್ಣಯಿಸಲಾಯಿತು. ಸಂಸ್ಥೆಯ ಎಲ್ಲಾ ನಿರ್ದೇಶಕರು, ಸಲಹಾ ಸಮಿತಿ ಸದಸ್ಯರು, ಲೆಕ್ಕ ಪರಿಶೋಧಕರಾದ ಶ್ರೀ ಬಿ.ವಿ.ರವೀಂದ್ರನಾಥ್ ಮತ್ತು ಮುಖ್ಯ ಕಾರ್ಯನಿರ್ವಾಹಕ ಶ್ರೀ ಶ್ರೀನಿವಾಸ್‌ಮೂರ್ತಿ ಎಂ.ಎನ್. ಉಪಸ್ಥಿತರಿದ್ದರು.



ಜಮ್ಮಲದಿನ್ನಿಯಲ್ಲಿ ಜನಸ್ನೇಹಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿಯಮಿತದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಅರುಣ ಶಹಾಪೂರವರು ನೆರವೇರಿಸಿದರು.



ಬಿಜಾಪುರದಲ್ಲಿ ಪ್ರವೇಶ ತರಬೇತಿ ಕಾರ್ಯಕ್ರಮವನ್ನು ಸಂಯುಕ್ತ ಸಹಕಾರಿ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರ ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು.

# ತರಬೇತಿಯ ಲಾಭ ಪಡೆದುಕೊಳ್ಳಲು ಸೌಹಾರ್ದ ಸಹಕಾರಿಗಳು ಮುಂದಾಗಬೇಕು-ಶ್ರೀ ರಾವಸಾಹೇಬ್ ಪಾಟೀಲ್

**ಚಿಕ್ಕೋಡಿ :** ವ್ಯಕ್ತಿಯ ಬೆಳವಣಿಗೆಗೆ ತರಬೇತಿ ಅವಶ್ಯಕವಾಗಿತ್ತು ಇಂಥ ತರಬೇತಿಯನ್ನು ಪಡೆದುಕೊಂಡು ಸಹಕಾರಿ ರಂಗವನ್ನು ಸದೃಢಗೊಳಿಸುವಂತೆ ಸಂಯುಕ್ತ ಸಹಕಾರಿ ನಿರ್ದೇಶಕರು ಹಾಗೂ ಸಹಕಾರಿ ರತ್ನ ಪ್ರಶಸ್ತಿ ವಿಜೇತರಾದ ರಾವಸಾಹೇಬ್ ಅ. ಪಾಟೀಲರವರು ದಿನಾಂಕ 03-06-2014ರಂದು ಚಿಕ್ಕೋಡಿ ನಗರದ ಹುಲಿಗೆಮ್ಮ ರೆಸಿಡೆನ್ಸಿ ಸಭಾ ಭವನದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರುರವರು ಬೆಳಗಾವಿ ಜಿಲ್ಲೆಯ ಚಿಕ್ಕೋಡಿ, ಹುಕ್ಕೇರಿ, ರಾಯಭಾಗ ಹಾಗೂ ಅಥಣಿ ತಾಲೂಕುಗಳಲ್ಲಿ ಇತ್ತೀಚೆಗೆ ಹೊಸದಾಗಿ ನೋಂದಣಿಗೊಂಡ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಾಹಕರಿಗೆ ಏರ್ಪಡಿಸಿದ ಪ್ರವೇಶ ತರಬೇತಿ ಕಾರ್ಯಗಾರದಲ್ಲಿ ಮುಖ್ಯ ಅತಿಥಿ ಭಾಷಣದಲ್ಲಿ ಉಪಸ್ಥಿರಿದ್ದ ಎಲ್ಲಾ ಸೌಹಾರ್ದ ಸಹಕಾರಿ ಸಿಬ್ಬಂದಿಗಳಿಗೆ ಹಾಗೂ ನಿರ್ದೇಶಕರಿಗೆ ಕರೆ ನೀಡಿದರು. ಕರ್ನಾಟಕದಲ್ಲಿಯ ಬೆಳಗಾವಿ ಜಿಲ್ಲೆಯಲ್ಲಿ ಸಹಕಾರಿಯ ಬೆಳವಣಿಗೆ ವೇಗ ರೀತಿಯಲ್ಲಿ ಸಾಗುತ್ತಿದ್ದು, ಈ ವೇಗದಲ್ಲಿ ಹೊಸ ಆಯಾಮ ಆಳವಡಿಸಿಕೊಂಡು ಇನ್ನು ಸದೃಢವಾಗಿಸಿಕೊಂಡು ರಾಜ್ಯಕ್ಕೆ ಮಾದರಿಯಾಗಬೇಕು ಎಂದು ಸಹ ಭಾಷಣದಲ್ಲಿ ಹೇಳಿಕೆ ನೀಡಿದರು. ತರಬೇತಿ ಕಾರ್ಯಕ್ರಮದ ಪ್ರಾರಂಭದ ಮುಂಚೆ ಪ್ರಸ್ತುತ್ತ ಕೇಂದ್ರ ಸರ್ಕಾರ ಗ್ರಾಮೀಣಭಿವೃದ್ಧಿ ಸಚಿವರಾದ ಗೋಪಿನಾಥ ಮುಂಡೆ ಅವರು ಬೆಳಗ್ಗೆ ನಿಧನರಾದ ನಿಮಿತ್ತ ಮೃತರ ಆತ್ಮಕ್ಕೆ ಒಂದು ನಿಮಿಷ ಮೌನ ಆಚರಣೆ ಮಾಡಲಾಯಿತು. ತರಬೇತಿಗೆ ಭಾಗವಹಿಸಿದ ಎಲ್ಲಾ ಪ್ರತಿನಿಧಿಗಳು ಸಚಿವರಾದ ಶ್ರೀ ಗೋಪಿನಾಥ ಮುಂಡೆ ಅವರ ನಿಧನಕ್ಕೆ ಸಂತಾಪವನ್ನು ವ್ಯಕ್ತಪಡಿಸಿದರು.

ವೇದಿಕೆಯ ಮೇಲೆ ಅರಿಹಂತ್ ಕ್ರೆಡಿಟ್ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ರಾವಸಾಹೇಬ್ ಅ. ಪಾಟೀಲ್, ಮಾಜಿ ಶಾಸಕರಾದ ಶ್ರೀ ಕೆ.ಪಿ. ಮಗೆನ್ನವರ, ಸಂಯುಕ್ತ ಆಹ್ವಾನಿತ ನಿರ್ದೇಶಕಗಳಾದ ಶ್ರೀ ಜಯಾನಂದ ಬಿ. ಜಾಧವ ಮತ್ತು ಶ್ರೀ ಶ್ರೀಕಾಂತ್ ಹತನೂರೆ ಹಾಗೂ ಸಂಪನ್ಮೂಲ ವ್ಯಕ್ತಿಯಾದ ಶ್ರೀ ಸುಭಾಷ್ ಹೆಗಡೆ, ವಿಭಾಗೀಯ ಮ್ಯಾನೇಜರಾದ ಶ್ರೀ ಜಿ.ಎಸ್ ಟೋಪಣ್ಣವರರವರು ಇದ್ದರು.

ಶ್ರೀ ಸುಭಾಷ್ ಹೆಗಡೆಯವರು ಮೊದಲನೆಯ ಅವಧಿಗೆ ಪ್ರವೇಶ ತರಬೇತಿ, ಎರಡನೆಯ ಅವಧಿಗೆ ಸಹಕಾರಿ ಸಂಸ್ಥೆಗಳ ಸಭೆಗಳು ವಿಷಯದ ಮೇಲೆ ಉಪನ್ಯಾಸವನ್ನು ನೀಡಿದರು.

# ವಿಶೇಷಾಧಿಕಾರಿಗಳ ನೇಮಕ

ಶ್ರೀ ಶಕ್ತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೆಂಗಳೂರು ಈ ಸೌಹಾರ್ದ ಸಹಕಾರಿಯಲ್ಲಿ ಠೇವಣಿದಾರರಿಗೆ ಠೇವಣಿ ವಾಪಸ್ ನೀಡದಿರುವುದರ ಬಗ್ಗೆ ಮತ್ತು ಪದಾಧಿಕಾರಿಗಳು ನಾಪತ್ತೆಯಾಗಿರುವ ಹಿನ್ನೆಲೆಯಲ್ಲಿ ಶ್ರೀ ಶ್ರೀಕಾಂತ ಬರುವೆ, ಸಹ ಪ್ರಧಾನ ವ್ಯವಸ್ಥಾಪಕ, ಸಂಯುಕ್ತ ಸಹಕಾರಿ ಬೆಂಗಳೂರು ಇವರನ್ನು ವಿಶೇಷಾಧಿಕಾರಿಯಾಗಿ ನೇಮಿಸಲಾಗಿದೆ.

## ನಿಗದಿತ ಸಮಯದ ಒಳಗಾಗಿ ಸಹಕಾರಿಯ ಆಡಳಿತ ಮಂಡಳಿಯ ಚುನಾವಣೆ ನಡೆಸದೆ ಇರುವುದಕ್ಕಾಗಿ ಈ ಕೆಳಗಿನ ಸೌಹಾರ್ದ ಸಹಕಾರಿಗಳಿಗೆ ವಿಶೇಷಾಧಿಕಾರಿಗಳನ್ನು ನೇಮಿಸಲಾಗಿದೆ.

| | |
|---|---|
| 1. **ನವೋದಯ ಗ್ರಾಮವಿಕಾಸ ವಿವಿದೋದ್ದೇಶ ಸೌಹಾರ್ದ ಸಹಕಾರಿ** ನಿ., ಚಂದಾಪುರ, ಶಿಗ್ಗಾಂವ್, ಹಾವೇರಿ. | **ಶ್ರೀ ಎಸ್.ಕೆ.ಸಜ್ಜನ್,** ಸಹಕಾರಿ ಅಭಿವೃದ್ಧಿ ಅಧಿಕಾರಿ, ಶಿಗ್ಗಾಂವ್ ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಛೇರಿ ಸವಣೂರು, ಹಾವೇರಿ. |
| 2. **ಶ್ರೀ ವಿನಾಯಕ ವಿವಿದೋದ್ದೇಶ ಸೌಹಾರ್ದ ಸಹಕಾರಿ** ನಿ., ನಂ. 809, ಮೆಣ್ಸಿ ಗಲ್ಲಿ, ಬೆಳಗಾವಿ. | **ಶ್ರೀ ಬಸವರಾಜ ಹೊಂಗಲ್,** ಕಿರಿಯ ಅಧಿಕಾರಿ, ಕ.ರಾ.ಸೌ.ಸಂ.ಸ.ನಿ., ಬೆಳಗಾವಿ. |
| 3. **ಶ್ರೀ ಶ್ರೀವಾರಿ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್** ಲಿ., ಹೆಚ್.ಎಸ್.ಆರ್. ಲೇಔಟ್, ಬೆಂಗಳೂರು. | **ಶ್ರೀ ಗುರುಪ್ರಸಾದ,** ಅಧಿಕಾರಿ, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು. |
| 4. **ಶ್ರೀ ಭೈರವನಾಥ ಮಲ್ಟಿಪರ್ಪೋಸ್ ಸೌಹಾರ್ದ ಸಹಕಾರಿ** ನಿ., ಬೆಳಗಾವಿ ಫುಲ್‌ಬಾಗ್ ಗಲ್ಲಿ (ಪಾಟೀಲ್ ಗಲ್ಲಿ), ಬೆಳಗಾವಿ. | **ಶ್ರೀ ಸೂರ್ಯಕಾಂತ್ ರ‍್ಯಾಕಲೆ,** ಅಧಿಕಾರಿ, ಕ.ರಾ.ಸೌ.ಸಂ.ಸ.ನಿ., ಬೆಳಗಾವಿ. |
| 5. **ಶೃತಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ.,** ಆಂಜನೇಯ ನಗರ, ಬೆಳಗಾವಿ. | **ಶ್ರೀ ಮನೋಹರ ಎಮ್.ಎನ್.,** ಸಹಾಯಕರು, ಕ.ರಾ.ಸೌ.ಸಂ.ಸ.ನಿ., ಬೆಳಗಾವಿ. |

# ಮಾನ್ವಿ ಪಟ್ಟಣ ಸಹಕಾರ ಬ್ಯಾಂಕ್ ಸಿಬ್ಬಂದಿ ನೇಮಕಾತಿ ಪ್ರಕಟಣೆ

ರಾಯಚೂರು ಜಿಲ್ಲೆಯ ಮಾನ್ವಿಯಲ್ಲಿರುವ ಪಟ್ಟಣ ಸಹಕಾರ ಬ್ಯಾಂಕಿನ ಯೋಜಿತ ವಿವಿಧ ಶಾಖೆಗಳಲ್ಲಿ ಕಾರ್ಯನಿರ್ವಹಣೆಗಾಗಿ ಸಿಬ್ಬಂದಿ ನೇಮಕಕ್ಕಾಗಿ ಪತ್ರಿಕಾ ಪ್ರಕಟಣೆಯನ್ನು ವಿನಂತಿ ಮೇರೆಗೆ ಹೊರಡಿಸಲಾಗಿದೆ. ವಿವರ ಈ ರೀತಿ ಇದೆ

1. ಕಿರಿಯ ಸಹಾಯಕರು (ಜ್ಯೂನಿಯರ್ ಅಸಿಸ್ಟಂಟ್) 35 ಹುದ್ದೆಗಳು ಪರಿಕ್ಷಾರ್ಥ ಅವಧಿಯಲ್ಲಿ ಸಂಬಳ. ರೂ 10,000/–ಪರಿಕ್ಷಾರ್ಥ ಅವಧಿ ಮುಗಿದ ನಂತರ ಸಂಬಳ ರೂ 14,550/– ಮೂಲ ವೇತನ ಕರ್ನಾಟಕ ಸರಕಾರದಲ್ಲಿರುವಂತೆ ತುಟ್ಟಿ ಭತ್ಯೆ,ರೂ 2,000 ಮನೆಬಾಡಿಗೆ ಮತ್ತು ಇತರೆ ಭತ್ಯೆಗಳು ಪ್ರಾವಿಡೆಂಟ್ ಫಂಡ್, ಗ್ರಾಚ್ಯೂಯಿಟಿ ಮತ್ತು ಸಾಮೂಹಿಕ ವಿಮಾ ಸೌಲಭ್ಯ.
2. ಅಧಿಕಾರಿ. (ಆಫಿಸರ್) 12 ಹುದ್ದೆಗಳು. ಪರಿಕ್ಷಾರ್ಥ ಅವಧಿಯಲ್ಲಿ ಸಂಬಳ. ರೂ 12,000/–ಪರಿಕ್ಷಾರ್ಥ ಅವಧಿ ಮುಗಿದ ನಂತರ ಸಂಬಳ ರೂ 16000/– ಮೂಲ ವೇತನ ಕರ್ನಾಟಕ ಸರಕಾರದಲ್ಲಿರುವಂತೆ ತುಟ್ಟಿ ಭತ್ಯೆ, ರೂ 2,000 ಮನೆಬಾಡಿಗೆ ಮತ್ತು ಇತರೆ ಭತ್ಯೆಗಳು ಪ್ರಾವಿಡೆಂಟ್ ಫಂಡ್, ಗ್ರಾಚ್ಯೂಯಿಟಿ ಮತ್ತು ಸಾಮೂಹಿಕ ವಿಮಾ ಸೌಲಭ್ಯ.

**ಎರಡು ಹುದ್ದೆಗಳಿಗೆ ಅರ್ಹತೆಗಳು :**

- ಅಂಗೀಕೃತ ವಿಶ್ವವಿದ್ಯಾನಿಲಯದ ಪದವಿ.
- ಬ್ಯಾಂಕಿಂಗ್ ಕ್ಷೇತ್ರದಲ್ಲಿ ಅನುಭವವಿರುವವರಿಗೆ ಆದ್ಯತೆ.
- ಅಧಿಕಾರಿಗಳ ಹುದ್ದೆಗೆ ಹಣಕಾಸಿನ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸಿದವರಿಗೆ ಆದ್ಯತೆ.
- ಕಂಪ್ಯೂಟರ್ ಜ್ಞಾನ ಅಗತ್ಯ.
- ವಯೋಮಿತಿ : 1–6–2014ಕ್ಕೆ 30 ವರ್ಷ ಮೀರಿರಬಾರದು.
- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 15–7–2014

ಅರ್ಜಿ ಸಲ್ಲಿಸಲು ಇಚ್ಛಿಸುವವರು ಒಂದು ಬಿಳಿಯ ಕಾಗದದ ಮೇಲೆ ತಮ್ಮ ವೈಯಕ್ತಿಕ ವಿವರಗಳನ್ನು ಬರೆದು ವಿದ್ಯಾರ್ಹತೆ ಹಾಗೂ ಅನುಭವದ ವಿವರಗಳ ಝೆರಾಕ್ಸ್ ಪ್ರತಿಗಳನ್ನು ಲಗತ್ತಿಸಿ ಪರಿಕ್ಷಾ ಶುಲ್ಕ ರೂ 200/–ಗಳ ಡಿ.ಡಿ.ಯನ್ನು ಮಾನ್ವಿ ಪತ್ತಿನ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಹೆಸರಿನಲ್ಲಿ ತೆಗೆದು ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಮಾನ್ವಿ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ ನಿ., ಅಪರ್ಣ ಚಿತ್ರಮಂದಿರ ಮಾನ್ವಿ ಕಾಂಪ್ಲೆಕ್ಸ್, – 584213 ರಾಯಚೂರು ಜಿಲ್ಲೆ ಕರ್ನಾಟಕ ರಾಜ್ಯ ಎಂದು ಬರೆದು ಕಳುಹಿಸಬೇಕು. ಎರಡು ಹುದ್ದೆಗಳಿಗೆ ಅರ್ಜಿಸಲ್ಲಿಸುವವರು ಪರಿಕ್ಷಾ ಶುಲ್ಕ ರೂ 400/– ಗಳ ಡಿ.ಡಿ ಯನ್ನು ತೆಗೆದು ಒಂದೇ ಅರ್ಜಿಯಲ್ಲಿ ಎರಡು ಹುದ್ದೆಗಳಿಗಾಗಿ ಎಂದು ನಮೂದಿಸಬೇಕು.

**ಹೆಚ್ಚಿನ ವಿವರಗಳಿಗೆ ದೂರವಾಣಿ :** 08538 220609 ಬ್ಯಾಂಕಿನ ವೆಬ್‌ಸೈಟ್ : www.mpssbank.com Email.mpssb-@yahoo.com



ಕೌಸ್ತುಭ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ., ಮೈಸೂರು ಇದರ ಉದ್ಘಾಟನೆಯನ್ನು ಮಾನ್ಯ ಸಹಕಾರ ಸಚಿವರಾದ ಶ್ರೀ ಎಚ್.ಎಸ್.ಮಹದೇವ ಪ್ರಸಾದರವರು, ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವ್‌ರವರು, ಮೈಸೂರು ಪ್ರಾಂತ ಸಹಕಾರ ಸಂಘಗಳ ಜಂಟಿ ನಿಬಂಧಕರಾದ ಶ್ರೀಮತಿ ಆಶಾರವರು, ಮೈಸೂರು ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರಾರ ಶ್ರೀ ಶಶಿಧರ್‌ರವರು ಹಾಗೂ ಸಹಕಾರಿ ಗಣ್ಯರು ಭಾಗವಹಿಸಿ ಸಹಕಾರಿಯ ಉದ್ಘಾಟನೆಯನ್ನು ನೆರವೇರಿಸಿದರು.

ಕೌಸ್ತುಭ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ., ಮೈಸೂರು ಇದರ ಆಡಳಿತ ಮಂಡಳಿ ಪದಾಧಿಕಾರಿಗಳಾದ ಶ್ರೀ ಸ್ವಾಮಿನಾಥ ಅಧ್ಯಕ್ಷರು, ಶ್ರೀ ಭಗವಾನ್ ಉಪಾಧ್ಯಕ್ಷರು ಹಾಗೂ ನಿರ್ದೇಶಕರುಗಳಾದ ಶ್ರೀ ವೇಣುಗೋಪಾಲ್, ಶ್ರೀ ಪರಾಶರಣ್, ಶ್ರೀ ರಘುನಂದನ, ಹಾಗೂ ಶ್ರೀ ಶ್ರೀನಿವಾಸ ಇನ್ನಿತರ ನಿರ್ದೇಶಕರು ಮತ್ತು ಸಹಕಾರಿಯ ಮುಖ್ಯಾಕಾರ್ಯನಿರ್ವಾಹಕರಾದ ಶ್ರೀ ಕೃಷ್ಣನ್‌ರವರು ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿದ್ದರು.





ಶ್ರೀ ಪ್ರಭುಲಿಂಗೇಶ್ವರ ಸೌಹಾರ್ದ ಸಹಕಾರಿಯ ಪ್ರಸ್ತುತ ಸಿದ್ದಾಪೂರ ಸಕ್ಕರೆ ಕಾರ್ಖಾನೆ ಆವರಣದಲ್ಲಿರುವ ಪ್ರಧಾನ ಕಚೇರಿಯನ್ನು ಜೂ. 16ರಂದು 'ಜಗದೀಶ ಗುಡಗುಂಟಿಮಠ ವಾಣಿಜ್ಯ ಸಂಕೀರ್ಣದ ಎರಡನೆ ಮಹಡಿಯಲ್ಲಿ, ಜಮಖಂಡಿ ತಾಲ್ಲೂಕಿನ ಶಾಸಕರಾದ ಶ್ರೀ ಸಿದ್ದು ನ್ಯಾಮಗೌಡ ಹಾಗೂ ವಿಧಾನ ಪರಿಶತ್ ಸದಸ್ಯಾರಾದ ಶ್ರೀ ಜಿ.ಎಸ್. ನ್ಯಾಮಾಗೌಡ ಮತ್ತು ಶ್ರೀ ಗೌರಿಶಂಕರ ಶಿವಾಚಾರ್ಯ ಇವರ ದಿವ್ಯ ಸಾನಿಧ್ಯ ಹಾಗೂ ಡಾ॥ ಅಭಿನವ ಚನ್ನಬಸವ ಮಹಾಸ್ವಾಮಿಗಳ ನೇತೃತ್ವದಲ್ಲಿ ಉದ್ಘಾಟನೆಗೊಂಡಿತು.



ಶ್ರೀ ಬಸವೇಶ್ವರ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿಯ ಗೋಕಾಕ ಶಾಖೆಯ ಪ್ರಥಮ ವಾರ್ಷಿಕೋತ್ಸವವು ಪೂಜ್ಯ ಶ್ರೀ ಮಲ್ಲಯ್ಯ ಮಹಾಸ್ವಾಮಿಗಳೂ ಶಿವಾನಂದ ಮಠ, ಘೋಡಗೇರಿ ಇವರ ಸಾನಿಧ್ಯದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಕಾಡಪ್ಪ ಬಸವಣ್ಣಿ ಮಗದುಮ್ಮ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ರಾವ್‌ಸಾಹೇಬ್ ಅ.ಪಾಟೀಲ, ಶ್ರೀ ಶ್ರೀಕಾಂತ ಬಾಳಕೃಷ್ಣ ಹತನೂರೆ ಹಾಗೂ ಸಹಕಾರಿಯ ಉಪಾಧ್ಯಕ್ಷರು ಮತ್ತು ಆಡಳಿತ ಮಂಡಳಿಯ ಸದಸ್ಯರು ಈ ಸಂದರ್ಭದಲ್ಲಿದ್ದರು.



ವಿಕಾಸ ಜ್ಯೋತಿ ಪತ್ತಿನ ಸೌಹಾರ್ದ ಸಹಕಾರಿ ನಿ., ದ ಇ-ಸ್ಟಾಂಪಿಂಗ್ ಉದ್ಘಾಟನೆಯನ್ನು ಸಹಕಾರಿಯ ಅಧ್ಯಕ್ಷಾರದ ಶ್ರೀ ವೀರನಗೌಡ ಎಲ್ ಭರಮಗೌಡ್ರು ಇವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಆಡಳಿತ ಸದಸ್ಯರು, ಸಿಬ್ಬಂದಿವರ್ಗ ಹಾಗೂ ಪಿಗ್ಮಿ ಏಜೆಂಟರ್ ಉಪಸ್ಥಿತರಿದ್ದರು.

# ಕರ್ನಾಟಕದ ಸೌಹಾರ್ದ ಸಹಕಾರಿ ವ್ಯವಸ್ಥೆ ಯಶಸ್ಸಿನ ಬಗ್ಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಅಧ್ಯಯನ ಕುತೂಹಲ – ಪ್ರೊ.ಯಶವಂತ ಡೊಂಗ್ರೆ

**ದಿನಾಂಕ : 20/6/2014 ರಂದು ಸಂಯುಕ್ತ ಸಹಕಾರಿಯ ಕಚೇರಿಗೆ ಮೈಸೂರು ವಿಶ್ವವಿದ್ಯಾನಿಲಯದ ಥರ್ಡ ಸೆಕ್ಟರ ರೀಸರ್ಚ ಸೆಂಟರನ ಮುಖ್ಯಸ್ಥ ಪ್ರೋ ಯಶವಂತ ಡೊಂಗ್ರೆಯವರು ಭೇಟಿ ನೀಡಿದ ಸಂದರ್ಭದಲ್ಲಿ ಶ್ರೀಯುತರು ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆ ಹಾಗೂ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ ಸಂತಸ ವ್ಯಕ್ತ ಪಡಿಸಿದರು. ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳ ಯಶಸ್ಸಿನ ಬಗ್ಗೆ ದೆಹಲಿ ಹಾಗೂ ಜಪಾನವರೆಗೂ ವಿಷಯಗಳು ಹರಡಿವೆ ಎಂದು ತಿಳಿಸಿದರು. ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆ ಹಾಗೂ ಸಂಯುಕ್ತ ಸಹಕಾರಿಯ ಚಟುವಟಿಕೆಗಳ ಬಗ್ಗೆ ಅವರು ವ್ಯಕ್ತ ಪಡಿಸಿದ ಅಭಿಪ್ರಾಯಗಳು.**

**ತಳಹಂತದಲ್ಲಿ ಸದಸ್ಯ ಶಿಕ್ಷಣ ಪರಿಣಾಮಕಾರಿಯಾಗಿರಬೇಕು :** ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಪರಿಣಾಮಕಾರಿ ಕಾರ್ಯನಿರ್ವಹಣೆಗೆ ಸದಸ್ಯರ ಜಾಗೃತಿ ಅಗತ್ಯವೆಂಬುದನ್ನು ಎಲ್ಲರೂ ಅರಿತಿದ್ದಾರೆ. ಆದರೆ ತರಬೇತಿ ಶಿಬಿರಗಳಲ್ಲಿ ಮತ್ತು ಕಾರ್ಯಾಗಾರಗಳಲ್ಲಿ ಸದಸ್ಯರ ಪಾಲುಗಾರಿಕೆಯ ಪ್ರಮಾಣ ಸಾಲದು. ಕೇವಲ ನಿರ್ದೇಶಕರು ಮತ್ತು ಅಧಿಕಾರಿಗಳು ಭಾಗವಹಿಸುತ್ತಾರೆ. ಇದಕ್ಕಾಗಿ ಸದಸ್ಯರು ಪಾಲ್ಗೊಳ್ಳುವಂತಹ ತರಬೇತಿ ಕಾರ್ಯಕ್ರಮಗಳನ್ನು ಹೆಚ್ಚು ಸಂಘಟಿಸುವುದು ಅವಶ್ಯಕವೆಂದು ಅಭಿಪ್ರಾಯ ಪಟ್ಟರು. ಈ ಬಗ್ಗೆ ಮಹಾರಾಷ್ಟ್ರದ ಅಪ್ನಾ ಬಜಾರಗಳನ್ನು ಉದಾಹರಣೆಯಾಗಿ ನೀಡಿದ ಶ್ರೀಯುತರು ಸದಸ್ಯರು ತಮ್ಮ ಕುಟುಂಬದವ ರೊಂದಿಗೆ ಪಾಲ್ಗೊಳ್ಳಲು ಅವಕಾಶವಾಗುವಂತಿರಬೇಕು. ಹೀಗಾದಾಗ ಸಹಕಾರಿಗಳ ಕಾರ್ಯಕ್ರಮಗಳಲ್ಲಿ ಸದಸ್ಯರ ಪಾಲ್ಗೊಳ್ಳುವಿಕೆ ಹೆಚ್ಚಾಗುತ್ತದೆ. ಸದಸ್ಯರಿಗೆ ತಮ್ಮ ಸಹಕಾರಿ ಸಂಸ್ಥೆಯ ಬಗ್ಗೆ ಅಭಿಮಾನ ಹೆಚ್ಚುತ್ತದೆ. ಇಂತಹ ಕಾರ್ಯಕ್ರಮಗಳು ಹೆಚ್ಚಬೇಕು ಎಂದು ತಿಳಿಸಿದರು.

**ಯುವಕರ ಹಾಗೂ ಮಹಿಳೆಯರ ಭಾಗವಹಿಸುವಿಕೆ ಹೆಚ್ಚಬೇಕು: ವಿದ್ಯಾರ್ಥಿ ಸಹಕಾರ ಸಂಘಗಳನ್ನು ಹೆಚ್ಚಿಸಬೇಕು :** ಸಹಕಾರ ಕ್ಷೇತ್ರದಲ್ಲಿ ಯುವಕರ ಹಾಗೂ ಮಹಿಳೆಯರ ಭಾಗವಹಿಸುವಿಕೆಯ ಬಗ್ಗೆ ವೇದಿಕೆಯ ಮಾತುಗಳು ಸಾಲದು. ಯುವಕರಿಗೆ ಹಾಗೂ ಮಹಿಳೆಯರಿಗೆ ಸಹಕಾರ ಕ್ಷೇತ್ರದ ಬಗ್ಗೆ ಮಾಹಿತಿ ನೀಡುವ ಕಾರ್ಯಕ್ರಮಗಳು ನಡೆದು ಯುವಕರನ್ನು ಹಾಗೂ ಮಹಿಳೆಯರನ್ನು ಈ ಕ್ಷೇತ್ರಕ್ಕೆ ಬರಮಾಡಿಕೊಳ್ಳುವ ನಿಟ್ಟಿನಲ್ಲಿ ಶಾಲಾ ಕಾಲೇಜುಗಳ ಹಂತದಲ್ಲಿ ವಿದ್ಯಾರ್ಥಿ ದೆಸೆಯಿಂದಲೇ ಸಹಕಾರ ಕಾರ್ಯಕ್ಷೇತ್ರದ ಚಟುವಟಿಕೆಗಳ ಬಗ್ಗೆ ಪ್ರಾಯೋಗಿಕ ತರಬೇತಿ ನೀಡಿದಂತಾಗುತ್ತದೆ. ಹೆಚ್ಚಿನ ಯುವಕರು ಹಾಗೂ ಮಹಿಳೆಯರು ಸಹಕಾರ ಕ್ಷೇತ್ರಕ್ಕೆ ಬರಲು ಆಸಕ್ತಿ ಹೊಂದುತ್ತಾರೆ ಸೌಹಾರ್ದ ಸಹಕಾರಿಗಳಿಗೆ ಈ ಕ್ಷೇತ್ರದಲ್ಲಿ ಹೆಚ್ಚಿನ ಅವಕಾಶಗಳಿವೆ ಎಂಬುದು ಅವರ ಅಭಿಪ್ರಾಯ.

**ಸಂಶೋಧನೆ ಮತ್ತು ಮೌಲ್ಯಮಾಪನ ಕಾರ್ಯ ಅವಶ್ಯಕ :** ಸಹಕಾರ ಕ್ಷೇತ್ರದ ಸಾಧನೆ, ಸವಾಲುಗಳ ಹಾಗೂ ಅವಕಾಶಗಳ ವ್ಯಾಪ್ತಿಯ ಬಗ್ಗೆ



**ಸಂಯುಕ್ತ ಸಹಕಾರಿಯ ಅಧಿಕಾರಿಗಳೊಂದಿಗೆ ಪ್ರೊ. ಯಶವಂತ ಡೊಂಗ್ರೆ**

ಸಂಯುಕ್ತ ಸಹಕಾರಿಯು ಇದುವರೆಗೆ ಮಾಡಿರುವ ಹಾಗೂ ಮುಂಬರುವ ದಿನಗಳಲ್ಲಿ ಮಾಡಲಿರುವ ಕಾರ್ಯಚಟುವಟಿಕೆಗಳ ಬಗ್ಗೆ ಮೌಲ್ಯಮಾಪನ ಮಾಡುವುದು ಅಗತ್ಯ. ಮೌಲ್ಯಮಾಪನದ ಆಧಾರದ ಮೇಲೆ ಸಂಶೋಧನೆ ಮಾಡುವುದು ಸುಲಭವಾಗುತ್ತದೆ.

ಈ ದಿಸೆಯಲ್ಲಿ ಒಂದು ವಿಭಾಗವನ್ನು ಹೊಂದುವುದು ಅಗತ್ಯವೆಂದು ತಿಳಿಸಿದ ಶ್ರೀಯುತರು ವಿಶ್ವವಿದ್ಯಾನಿಲಯಗಳ ಹಂತದಲ್ಲೂ ಸೌಹಾರ್ದ ಸಹಕಾರಿ ಕ್ಷೇತ್ರದ ಬಗ್ಗೆ ಸಂಶೋಧನೆ ಮತ್ತು ಮೌಲ್ಯಮಾಪನ ಕಾರ್ಯವನ್ನು ನಿರ್ವಹಿಸುವ ವ್ಯವಸ್ಥೆ ಮಾಡಬಹುದಾಗಿದೆ ಸಂಶೋಧನೆ ಮತ್ತು ಮೌಲ್ಯಮಾಪನ ವಿಭಾಗ ಸಹಕಾರಿ ಕ್ಷೇತ್ರಕ್ಕೆ ಸಂಬಂದಿಸಿದ ಎಲ್ಲ ಚಟುವಟಿಕೆಗಳ ಅಂಕಿ ಅಂಶಗಳನ್ನು ಹೊಂದುವುದು ಅಗತ್ಯ. ಅಂಕಿ ಅಂಶಗಳನ್ನು ಹೊಂದಿದ ಯಾವುದೆ ಸಂಸ್ಥೆ ತನ್ನಲ್ಲಿಯೇ ಸಂಶೋಧನೆ ಮತ್ತು ಮೌಲ್ಯಮಾಪನ ವಿಭಾಗದ ಮೂಲಕವಾಗಲಿ ಅಥವಾ ಬೇರೆ ಸಂಸ್ಥೆಗೆ ಸಂಶೋಧನೆ ಮತ್ತು ಮೌಲ್ಯಮಾಪನ ಕಾರ್ಯವಹಿಸಿಕೊಡಬಹುದಾಗಿದೆ. ಸಂಶೋಧನೆ ಮತ್ತು ಮೌಲ್ಯಮಾಪನ ಮುಂಬರುವ ದಿನಗಳ ಕಾರ್ಯಚಟುವಟಿಕೆಗಳ ದಿಕ್ಸೂಚಿಯಾಗಿ ಈ ವಿಭಾಗ ಕಾರ್ಯನಿರ್ವಹಿಸುವುದು ಅವಶ್ಯಕ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

# ಹೊಸಪೇಟೆ ನಗರ ಸಹಕಾರಿಗಳಿಗೆ ಆರೋಗ್ಯ ರಕ್ಷಣಾ ಯೋಜನೆ ಕಾರ್ಯಗಾರ

ಯಶಸ್ವಿನಿ ನಗರ ಸಹಕಾರಿಗಳ ಆರೋಗ್ಯ ರಕ್ಷಣಾ ಯೋಜನೆ ವಿಮಾ ಯೋಜನೆ ಅಲ್ಲ. ಇದೊಂದು ಸ್ವಯಂ ನಿಧಿ ಶಸ್ತ್ರ ಚಿಕಿತ್ಸೆ ಯೋಜನೆಯಾಗಿದ್ದು, ಪ್ರತಿಯೊಬ್ಬ ಸಹಕಾರಿ ಸದಸ್ಯರು ಸದಸ್ಯತ್ವ ಪಡೆದು ಸದುಪಯೋಗಪಡಿಸಿಕೊಳ್ಳಬೇಕು ಎಂದು ನಗರದ ಜಿಲ್ಲಾ ಸಹಕಾರ ಯೂನಿಯನ್ ನಿ. ಅಧ್ಯಕ್ಷ ಶ್ರೀ ಜೆ.ಎಂ.ವೃಷಭೇಂದ್ರಯ್ಯ ಹೇಳಿದರು.

ಹೊಸ ಪೇಟೆಯಲ್ಲಿ ಸಹಕಾರಿಗಳ ಆರೋಗ್ಯ ರಕ್ಷಣಾ ಯೋಜನೆಯ ಕಾರ್ಯಗಾರವನ್ನು ಜಿಲ್ಲಾ ಸಹಕಾರ ಯೂನಿಯನ್ ನಿ. ಅಧ್ಯಕ್ಷ ಶ್ರೀ ಜೆ.ಎಂ.ವೃಷಭೇಂದ್ರಯ್ಯ ಉದ್ಘಾಟಿಸಿದರು.

ನಗರದದಲ್ಲಿ ಸ್ಥಳೀಯ ಜಿಲ್ಲಾ ಸಹಕಾರ ಯೂನಿಯನ್ ನಿ., ಹಾಗೂ ಸ್ವಾತಿ ಪತ್ತಿನ ಸೌಹಾರ್ದ ಸಹಕಾರಿ ನಿ. ಹೊಸಪೇಟೆ ಇವರುಗಳ ಸಂಯುಕ್ತ ಆಶ್ರಯದಲ್ಲಿ ಯಶಸ್ವಿನಿ ನಗರದ ಸಹಕಾರಿಗಳ ಆರೋಗ್ಯ ರಕ್ಷಣಾ ಯೋಜನೆಯ ಕಾರ್ಯಗಾರವನ್ನು ಉದ್ಘಾಟಿಸಿ ಮಾತನಾಡಿದರು. ಸಹಕಾರ ಶಿಕ್ಷಣ ತರಬೇತಿ ಪ್ರಚಾರ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಇದರ ಯಶಸ್ವಿಗೆ ಪ್ರತಿಯೊಬ್ಬರು ಸಹಕರಿಸಿ ಗ್ರಾಮೀಣ ಪ್ರದೇಶಗಳಲ್ಲಿ ಸಹಕಾರ ತತ್ವಗಳ ಯಶಸ್ವಿಗೆ ಶ್ರಮಿಸಿ ಸಹಕಾರ ಚಳುವಳಿಯನ್ನು ಬಲಪಡಿಸಲು ಕರೆ ನೀಡಿದರು.




ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ನಿರ್ದೇಶಕ ಶ್ರೀ ಎಲ್. ಎಸ್.ಆನಂದ ಮಾತನಾಡಿ, ಸರ್ಕಾರ ಗ್ರಾಮೀಣ ಪ್ರದೇಶದ ರೈತರಿಗೆ ಸೀಮಿತವಾಗಿದ್ದ ಯಶಸ್ವಿನಿ ಯೋಜನೆಯನ್ನು ನಗರ ಸಹಕಾರಿ ಸದಸ್ಯರಿಗೂ ವಿಸ್ತರಿಸಿದೆ. ನಗರ ಸಹಕಾರಿ ಸಂಸ್ಥೆಗಳು ಸಹಕಾರಿ ಸದಸ್ಯರುಗಳಿಗೆ ಜಾಗೃತಿ ಮೂಡಿಸುವ ಮೂಲಕ ಸಹಕಾರಿ ಕ್ಷೇತ್ರವನ್ನು ಬಲಪಡಿಸಿಕೊಳ್ಳಬೇಕು ಎಂದರು. ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕ ಡಾ.ಜಿ.ಉಮೇಶ್ ಉಪನ್ಯಾಸ ನೀಡಿದರು. ಸ್ವಾತಿ ಪತ್ತಿನ ಸೌಹಾರ್ದ ಸಹಕಾರಿ ನಿ, ಶ್ರೀ ಎಂ.ನೀಲಕಂಠಯ್ಯ, ಅಧ್ಯಕ್ಷತೆ ವಹಿಸಿ ಮಾತನಾಡಿ, ಯಶಸ್ವಿನಿ ಯೋಜನೆಯಡಿ 6 ಲಕ್ಷ ಉಚಿತ ಶಸ್ತ್ರಚಿಕಿತ್ಸೆಗಳು, 13 ಲಕ್ಷ ಹೊರ ರೋಗಿಗಳು ಪ್ರಯೋಜನೆ ಪಡೆದಿದ್ದಾರೆ ಎಂದು ತಿಳಿಸಿದರು.

ವಿಕಾಸ ಬ್ಯಾಂಕಿನ ಅಧ್ಯಕ್ಷ ಶ್ರೀ ವಿಶ್ವನಾಥ್ ಚ.ಹಿರೇಮಠ್, ಡಾ. ಹನುಮಂತರಾವ್, ಶ್ರೀ ಗೌಳಿ ಕುಮಾರ್, ಶ್ರೀ ವಿ.ಶಂಕ್ರಾಚಾರ್ಯ, ಶ್ರೀ ಲಿಯಾಕತ್ ಅಲಿ, ಉಪಸ್ಥಿತರಿದ್ದರು. ಶ್ರೀ ಶಾಂತ ಮತ್ತು ಸಂಗಡಿಗರು ಪ್ರಾರ್ಥಿಸಿದರು, ಶ್ರೀಮತಿ ಕೆ.ನಾಗರತ್ನ ಸ್ವಾಗತಿಸಿದರು, ಶ್ರೀ ಜಿ.ಪಿ.ಪಾಂಡು ರಂಗಪ್ಪ ನಿರೂಪಿಸಿದರು. ಶ್ರೀ ಜಿ.ಪುರುಶೋತ್ತಮ ವಂದಿಸಿದರು.

## ಅಭಿನಂದನೆ



ಮೈಸೂರು ಜಿಲ್ಲಾ ಸಹಕಾರಿ ಯೂನಿಯನ್ ಹಾಗೂ ಮಹಿಳಾ ಸಹಕಾರಿಗಳ ವತಿಯಿಂದ ಮಹಿಳಾ ಆಯೋಗದ ಅಧ್ಯಕ್ಷರಾಗಿ ನೇಮಕಗೊಂಡಿರುವ ಶ್ರೀಮತಿ ಮಂಜುಳ ಮಾನಸರವರನ್ನು ಅಭಿನಂದಿಸಲಾಯಿತು.

## ನೋಂದಣಿ ಪತ್ರ ವಿತರಣೆ



ದಿನಾಂಕ : 19-06-14 ರಂದು ಶ್ರೀ ವಾಗ್ದೇವಿ ಸೌಹಾರ್ದ ಪತ್ತಿನ ಸಹಕಾರಿ (ನಿ) ಇದರ ಕಛೇರಿಯಲ್ಲಿ ಅಧ್ಯಕ್ಷರಾದ ಶ್ರೀ ಹೆಚ್.ಎನ್. ನವೀನ್ ಮತ್ತು ನಿರ್ದೇಶಕರು / ಸಿಬ್ಬಂದಿ ವರ್ಗದವರು ಸಹಕಾರಿ ಅರ್ಹ ಫಲಾನುಭವಿಗಳಿಗೆ ನಗರ ಯಶಸ್ವಿನಿ ಸಹಕಾರಿ ಆರೋಗ್ಯ ರಕ್ಷಣೆ ಯೋಜನೆ ನೋಂದಣಿ ಪತ್ರವನ್ನು ವಿತರಿಸಲಾಯಿತು.

## ಇ–ಸ್ಟಾಂಪಿಂಗ್ ಸೇವಾ ಕೇಂದ್ರ

ದಿನಾಂಕ : 19/6/14 ನೇ ಗುರುವಾರ ಕೃಷಿಕ್ ಸೌಹಾರ್ದ ಸಹಕಾರಿ ನಿ., ಶ್ರೀ ಮಾರಿಕಾಂಬಾ ಶಾಖೆ, ಸಾಗರ್ ಹೋಟೆಲ್ ವೃತ್ತ, ಶ್ರೀಮಾರಿಕಾಂಬಾ ತವರುಮನೆ ಪಕ್ಕ, ಇಲ್ಲಿ ಇ–ಸ್ಟಾಂಪಿಂಗ್ ಸೇವಾ ಕ್ರೇಂದ್ರವನ್ನು ಪ್ರಾರಂಭಿಸಲಾಯಿತು. ಹಿರಿಯರು ಹಾಗೂ ಜಿ.ಎಸ್.ಬಿ. ಸಮಾಜದ ಅಧ್ಯಕ್ಷರಾದ ಶ್ರೀ ಸೀತಾರಾಮ್ ರಾವ್ ಸಾಗರ ಇವರು ಇ–ಸ್ಟಾಂಪಿಂಗ್ ಸೇವೆಯನ್ನು ವಿದ್ಯುಕ್ತವಾಗಿ ಉದ್ಘಾಟಿಸಿದರು. ಸಹಕಾರಿಯ ಅಧ್ಯಕ್ಷರಾದ ಶ್ರೀ ಯು.ಹೆಚ್.ರಾಮಪ್ಪ ಅಧ್ಯಕ್ಷತೆ ವಹಿಸಿದ್ದರು. ಸಹಕಾರಿಯ ಎಲ್ಲಾ ನಿರ್ದೇಶಕರು ಹಾಜರಿದ್ದರು. ಅಧ್ಯಕ್ಷರಾದ ಶ್ರೀ ಯು.ಹೆಚ್.ರಾಮಪ್ಪನವರು ಪ್ರಾಸ್ತಾವಿಕವಾಗಿ ಮಾತನಾಡಿ ಸಹಕಾರಿಯ ಕಾರ್ಯವೈಖರಿಯನ್ನು ಪರಿಚಯಿಸಿದರು, ಉಪಾಧ್ಯಕ್ಷರಾದ ಶ್ರೀ ಕೆ.ಎಸ್.ಗೌತಮ್ ಸ್ವಾಗತಿಸಿದರು ಮುಖ್ಯಕಾರ್ಯನಿರ್ವಾಹಕಿ ಕು.ರೇಣುಕಾದೇವಿ ಕೆ.ಎಮ್.ಎಲ್ಲರನ್ನು ವಂದಿಸಿದರು.



## ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕುಗಳ ಸಿಬ್ಬಂದಿಯವರಿಗೆ ತರಬೇತಿ

ರಾಜ್ಯದ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕುಗಳ ಸಿಬ್ಬಂದಿಯವರಿಗಾಗಿ ಇದೇ ದಿನಾಂಕ : 21–07–2014 ರಿಂದ 27–07–2014ರವರೆಗೆ ಬೆಂಗಳೂರಿನ ಪದ್ಮನಾಭನಗರದಲ್ಲಿರುವ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯಲ್ಲಿ ತರಬೇತಿಯನ್ನು ಏರ್ಪಡಿಸಲಾಗಿದೆ. ಈ ತರಬೇತಿಯಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳ ಸಿಬ್ಬಂದಿಯವರ ಕಾರ್ಯತತ್ಪರತೆಯನ್ನು ಹಾಗೂ ಕ್ರೀಯಾ ಶೀಲತೆಯನ್ನು ಹೆಚ್ಚಿಸಲು ಪೂರಕವಾಗುವ ವಿಷಯಗಳನ್ನು ಅಳವಡಿಸಿ, ಅನುಭವಿ ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸಗಳನ್ನು ವ್ಯವಸ್ಥೆ ಮಾಡಲಾಗುವುದು. ತರಬೇತಿ ಪ್ರವೇಶ ಪಡೆಯುವ ಪ್ರತಿನಿಧಿಗಳ ಸಂಖ್ಯೆ 50 ಮಾತ್ರ. ಪ್ರವೇಶ ಶುಲ್ಕ ಒಬ್ಬರಿಗೆ ತಲಾ ರೂ. 500/–. ಪ್ರತಿನಿಧಿಗಳಿಗೆ ಊಟ, ಉಪಹಾರ ವಸತಿ ವ್ಯವಸ್ಥೆಗಳನ್ನು ಹಾಗೂ ಅಧ್ಯಯನ ಸಾಹಿತ್ಯವನ್ನು ಸಂಯುಕ್ತ ಸಹಕಾರಿಯು ವ್ಯವಸ್ಥೆ ಮಾಡುತ್ತದೆ.ಪ್ರತಿಯೊಂದು ಪಟ್ಟಣ ಸಹಕಾರ ಬ್ಯಾಂಕುಗಳಿಂದ ಕನಿಷ್ಠ 2 ಗರಿಷ್ಠ 5 ಸಂಖ್ಯೆಯಲ್ಲಿ ಪ್ರತಿನಿಧಿಗಳನ್ನು ಕಳುಹಿಸಿಕೊಡಲು ಕೋರಿದೆ.

### ಹೊಯ್ಸಳ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ – 1.39 ಕೋಟಿ ರೂ. ಲಾಭ

ಹೊಯ್ಸಳ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತವು 2013–14ನೇ ಸಾಲಿನಲ್ಲಿ ಷೇರು 1.31 ಕೋಟಿ ರೂಗಳು, ಕಾಯ್ದಿಟ್ಟ ನಿಧಿಗಳು–2.65 ಕೋಟಿ ರೂ.ಗಳು, ದುಡಿಯುವ ಬಂಡವಾಳ 21.65 ಕೋಟಿ ರೂಗಳು, ನಿವ್ವಳ ಲಾಭದ ಪ್ರಮಾಣ–1.39 ಕೋಟಿ ರೂ. ಗಳು ಆಗಿರುತ್ತದೆ ಎಂದು ಸಹಕಾರಿಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

## ಸೌಹಾರ್ದ ಸಹಕಾರಿಗಳ ಪರವಾಗಿ ಮಹತ್ವದ ಆದಾಯ ತೆರಿಗೆ ತೀರ್ಪುಗಳು

- ಮೇಲ್ಮನವಿ ಪ್ರಾಧಿಕಾರ ಬೆಂಗಳೂರು ಶ್ರೀ ವೇಮನ ಸೌಹಾರ್ದ ಸಹಕಾರಿ ಬೆಂಗಳೂರು ಪರವಾಗಿ ತೀರ್ಪು
- ಮೇಲ್ಮನವಿ ಪ್ರಾಧಿಕಾರ ಪಣಜಿ ಬೆಂಚ ಡಾ.ಪ್ರಭಾಕರ ಕೋರೆ ಕ್ರೆಡಿಟ್ ಸೌಹಾರ್ದ ಸಹಕಾರಿ ಅಂಕಲಿ ಪರವಾಗಿ ತೀರ್ಪು

ಬೆಂಗಳೂರಿನ ಆದಾಯ ತೆರಿಗೆ ಮೇಲ್ಮನವಿ ಪ್ರಾಧಿಕಾರ ಬೆಂಗಳೂರು ಇವರಲ್ಲಿ ಶ್ರೀ ವೇಮನ ಸೌಹಾರ್ದ ಸಹಕಾರಿಯವರು 2007–08, 2008–09 ಮತ್ತು 2010–11 ಸಾಲುಗಳಿಗಾಗಿ ಡೆಪೂಟಿ ಕಮಿಶನರ್ ಆದಾಯ ತೆರಿಗೆ ಸರ್ಕಲ್ 3 ಇವರ ವಿರುದ್ಧ ಸಲ್ಲಿಸಿದ ಮೇಲ್ಮನವಿಯನ್ನು ಪುರಸ್ಕರಿಸಿದ ಪ್ರಾಧಿಕಾರ ಸದರಿ ಸೌಹಾರ್ದ ಸಹಕರಿಯು ತೆರಿಗೆ ಕಾಯ್ದೆಯ ವ್ಯಾಪ್ತಿಗೆ ಒಳಪಡುವುದಿಲ್ಲವೆಂದು ದಿನಾಂಕ 04–04–2014 ರಂದು ತೀರ್ಪುನೀಡಿರುತ್ತಾರೆ. ಅದೇ ರೀತಿ ಡಾ.ಪ್ರಭಾಕರ ಕೋರೆ ಕ್ರೆಡಿಟ್ ಸೌಹಾರ್ದ ಸಹಕಾರಿ ಅಂಕಲಿ ಅವರು ಆದಾಯ ತೆರಿಗೆ ಅಧಿಕಾರಿ ವಾರ್ಡ –1 ನಿಪ್ಪಾಣಿ ಬೆಳಗಾವಿ ಜಿಲ್ಲೆ ಯವರ ವಿರುದ್ಧ ಸಲ್ಲಿಸಿದ ಮೇಲ್ಮನವಿಯನ್ನು ಮೇಲ್ಮನವಿ ಪ್ರಾಧಿಕಾರ ಪಣಜಿ ಬೆಂಚ ಇವರು ಪುರಸ್ಕರಿಸಿ ದಿನಾಂಕ 6–6–2014ರಲ್ಲಿ ಸದರಿ ಸೌಹಾರ್ದ ಸಹಕಾರಿಯು ಆದಾಯ ತೆರಿಗೆ ವ್ಯಾಪ್ತಿಗೆ ಒಳಪಡುವುದಿಲ್ಲವೆಂದು ತೀರ್ಪು ನೀಡಿರುತ್ತಾರೆ.

# ಸಹಕಾರ ಕ್ಷೇತ್ರದ ಶಕ್ತಿ ಸಾಮರ್ಥ್ಯ, ನ್ಯೂನತೆಗಳು ಅವಕಾಶಗಳು ಹಾಗೂ ಸವಾಲುಗಳು ಒಂದು ವಿಶ್ಲೇಷಣೆ

(Strength - Weakness - Opportunities and Threats analysis of the cooperative movement)

▸▸ ಡಾ.ಎಸ್.ಎ.ಸಿದ್ಧಾಂತಿ



(ಸಂಯುಕ್ತ ಸಹಕಾರಿಯು ದಿನಾಂಕ 30,31 ಮೇ 2014 ರಂದು ಬೆಂಗಳೂರಿನ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ಸಭಾಂಗಣದಲ್ಲಿ ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ ಏರ್ಪಡಿಸಿದ್ದ ತರಬೇತಿ ಕಾರ್ಯಕ್ರಮದ ಅಂಗವಾಗಿ ಕಾರ್ಯಕ್ರಮದಲ್ಲಿ ಭಾಗವಹಿಸಿದ ನಿರ್ದೇಶಕರುಗಳ ತಂಡಗಳನ್ನು ನಿರ್ಮಿಸಿ ಅವರುಗಳಿಗೆ ಮಾರ್ಗದರ್ಶನ ಮಾಡಿ ಅವರುಗಳಿಂದಲೇ ಸಹಕಾರ ಕ್ಷೇತ್ರದ ಶಕ್ತಿ ಸಾಮರ್ಥ್ಯ, ನ್ಯೂನತೆಗಳು ಅವಕಾಶಗಳು ಹಾಗೂ ಸವಾಲುಗಳು ಬಗ್ಗೆ ಅರಿವು ಮೂಡಿಸುವ ಪ್ರಯತ್ನದಲ್ಲಿ ಡಾ. ಎಸ್.ಎ. ಸಿದ್ಧಾಂತಿಯವರು ಮಂಡಿಸಿದ ಮಾನದಂಡಗಳು ಹಾಗೂ ಕಾರ್ಯಕ್ರಮದ ಕೊನೆಯಲ್ಲಿ ಮಾಡಿದ ಉಪನ್ಯಾಸದ ವಿವರಗಳನ್ನು ಸಹಕಾರಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ.)

ದೇಶದ ಸಹಕಾರ ಚಳುವಳಿಗೆ 109 ವರ್ಷಗಳು ಕಳೆದಿವೆ. ದೇಶದ ಅರ್ಥ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿ ಉತ್ತಮ ಆರ್ಥಿಕ ಸಂಘಟನೆಗಳಾಗಿ ಸಹಕಾರಿ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ದೇಶದ ವ್ಯವಸಾಯ ಕ್ಷೇತ್ರದಲ್ಲಿ "ಹಸಿರು ಕ್ರಾಂತಿ" ಹೈನುಗಾರಿಕಾ ಕ್ಷೇತ್ರದಲ್ಲಿ "ಶ್ವೇತ ಕ್ರಾಂತಿ" ಮೀನುಗಾರಿಕಾ ಕ್ಷೇತ್ರದಲ್ಲಿ "ನೀಲಿ ಕ್ರಾಂತಿ" ಮುಂತಾದವುಗಳ ಹರಿಕಾರನೆಂಬ ಖ್ಯಾತಿ ಹಾಗೂ ಗೌರವ ಈ ಸಹಕಾರ ಕ್ಷೇತ್ರಕ್ಕೆ ಸಲ್ಲುತ್ತದೆ. 97% ಗ್ರಾಮಗಳು ಹಾಗೂ ಗ್ರಾಮೀಣ ಜನರು ಈ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದ್ದಾರೆ. 6 ಲಕ್ಷದಷ್ಟು ಸಹಕಾರ ಸಂಸ್ಥೆಗಳು, 25 ಕೋಟಿಗೂ ಹೆಚ್ಚು ಸದಸ್ಯತ್ವ, 40 ಲಕ್ಷ ಕೋಟಿ ರೂಗಳ ಠೇವಣಿ 60 ಲಕ್ಷ ಕೋಟಿ ರೂಗಳ ದುಡಿಯುವ ಬಂಡವಾಳ 16.67 ಮಿಲಿಯನ್ ಅಂದರೆ 1.7 ಲಕ್ಷ ಜನರಿಗೆ ಉದ್ಯೋಗ ಒದಗಿಸಿರುವ ನಮ್ಮ ದೇಶದ ಸಹಕಾರ ಚಳುವಳಿ ವಿಶ್ವದಲ್ಲಿಯೇ ಬಲಿಷ್ಠ ಸಹಕಾರಿ ಚಳುವಳಿಯಾಗಿದೆ. ಈ ಕ್ಷೇತ್ರ ನಮ್ಮ ದೇಶದ ಆರ್ಥಿಕ ಅಭಿವೃದ್ಧಿಗೆ ಉತ್ತಮ ಕೊಡುಗೆ ನೀಡುತ್ತ ಬಂದಿದೆ. ಇನ್ನು ಮುಂದೆಯೂ ಈ ಕ್ಷೇತ್ರದಿಂದ ಇದು ಸಾಧ್ಯ ಎಂಬುದು ಸಹಕಾರಿಗಳ, ಆರ್ಥಿಕ ತಜ್ಞರ, ರಾಜಕೀಯ ಮುಖಂಡರ ಅಭಿಪ್ರಾಯವಾಗಿದೆ. ಈ ಚಳುವಳಿ ಇನ್ನೂ ಹೆಚ್ಚು ಬಲಿಷ್ಠವಾಗಿ ಬೆಳೆಯುವುದು ಅವಶ್ಯಕವಾಗಿದೆ. ಈ ಕ್ಷೇತ್ರದ ಪ್ರಗತಿ ಅವಲೋಕನದ ಜೊತೆಗೆ ಈ ಕ್ಷೇತ್ರದ ಶಕ್ತಿ ಸಾಮರ್ಥ್ಯ, ನ್ಯೂನತೆಗಳು, ಅವಕಾಶಗಳು, ಸವಾಲುಗಳ ಅಧ್ಯಯನ ಹಾಗೂ ವಿಶ್ಲೇಷಣೆಗೆ ಮಹತ್ವವಿದೆ.

ಈ ವಿಶ್ಲೇಷಣೆಗೆ ಸಂಸ್ಥೆಯ ವ್ಯವಸ್ಥೆಗಳ ಹಾಗು ಅನುಸರಿಸಿದ ಮಾನದಂಡಗಳ ಬಗ್ಗೆ ಅವಲೋಕನೆ ಅಗತ್ಯವೆನಿಸುತ್ತದೆ. ಅವುಗಳಲ್ಲಿ

ನಾಯಕತ್ವ – ಜಾತಿ ಮತ ಪಂಗಡಗಳ ಪ್ರಭಾವ – ಸ್ಥಳೀಯ ರಾಜಕೀಯ ಪ್ರಭಾವ – ಸ್ಥಳೀಯ ಧಾರ್ಮಿಕ ಪ್ರಭಾವ – ಸಾಮಾಜಿಕ ಹಾಗೂ ರಾಜಕೀಯ ವ್ಯವಸ್ಥೆಗಳು – ಆಡಳಿತ ವ್ಯವಸ್ಥೆ – ಆಡಳಿತ ಮಂಡಳಿಯ ಹಾಗೂ ಮುಖ್ಯ ಕಾರ್ಯ ನಿರ್ವಾಹಕರ ಸಂಬಂದ – ಚುನಾವಣೆಗಳು – ವಾರ್ಷಿಕ ಸಾಮಾನ್ಯ ಸಭೆ ಆಡಳಿತ ಮಂಡಳಿ ಸಭೆ – ವಾರ್ಷಿಕ ವರದಿಗಳು – ಲೆಕ್ಕ ಪರಿಶೋಧನಾ ವರದಿ ಹಾಗೂ ಅವುಗಳ ಅನುಪಾಲನಾ ವರದಿಗಳು ಸದಸ್ಯರ ಜಾಗೃತಿ ಸಹಕಾರ ತತ್ವಗಳು – ಸಹಕಾರಿಯ ಆಶಯ – ಸಹಕಾರ ಕ್ಷೇತ್ರದ ಮಹತ್ವ – ಸಹಕಾರ ಕಾಯ್ದೆಯ ಮಹತ್ವ –ಉಪವಿಧಿಗಳ ಬಗ್ಗೆ ಮಾಹಿತಿ ಸದಸ್ಯ ಶಿಕ್ಷಣ ಆಡಳಿತ (ಚುನಾಯಿತ ಸದಸ್ಯರು)ಆಡಳಿತ ಮಂಡಳಿಯ ಹಾಗೂ ಉಪಸಮಿತಿಗಳ ಚುನಾವಣೆ– ಪ್ರಭಾವಿ ವ್ಯಕ್ತಿಗಳ ಹಾಗೂ ಪಟ್ಟ ಭದ್ರ ವ್ಯಕ್ತಿಗಳ ಹಿಡಿತ– ಅಧಿಕಾರಿಗಳ ಪ್ರಭಾವ– ಮಹಿಳಾ ಪಾಲುಗಾರಿಕೆ ಆಡಳಿತ (ನೌಕರ ವರ್ಗ) ನೇಮಕಾತಿ ವಿಷಯಗಳು–ವಿದ್ಯಾರ್ಹತೆ ಹಾಗೂ ಅನುಭವ–ವ್ಯವಸ್ಥಾಪಕರು–ತರಬೇತಿ ಪಡೆದವರು / ನಿವೃತ್ತರು ಇತ್ಯಾದಿ ನಿರ್ಣಯಿಸುವ ವಿಧಾನ ಆಡಳಿತ ಮಂಡಳಿ– ಸದಸ್ಯರ ಸಂಬಂಧಗಳು – ಆಡಳಿತ ಮಂಡಳಿ – ವ್ಯವಸ್ಥಾಪಕರುಗಳ ಸಂಬಂಧಗಳು–ಆಡಳಿತ ಮಂಡಳಿ–ವಿವಿಧ ಉಪಸಮಿತಿ ಸಂಬಂದಗಳು.

ಸಹಕಾರಿ ಸಂಬಂದಗಳು. ಸಹಕಾರಿಗಳು – ನಿಬಂಧಕರ ಸಂಬಂದ ಗಳು ಸಹಕಾರಿಗಳು–ಸರಕಾರ ಮತ್ತು ಇತರೆ ಸ್ಥಳೀಯ ಸಂಸ್ಥೆಗಳು. ಸಹಕಾರಿ – ಸದಸ್ಯರ ಸಂಬಂದಗಳು ಸೌಲಭ್ಯಗಳು. ಕಟ್ಟಡಗಳು– ವಾಹನಗಳು– ಕಂಪ್ಯೂಟರ್‌ಗಳು – ಯಂತ್ರೋಪಕರಣಗಳು – ಇತರೆ ಸೌಲಭ್ಯಗಳು ವ್ಯಾಪಾರ ಅಭಿವೃದ್ಧಿಯೋಜನೆ, ಸಿದ್ಧಪಡಿಸಲಾಗುತ್ತಿದೆಯೇ? ಯಾರು ಸಿದ್ಧಪಡಿಸುತ್ತಾರೆ? ಅವುಗಳನ್ನು ಹೇಗೆ ಅನುಸರಿಸಲಾಗುತ್ತಿದೆ? ಲೆಕ್ಕಪತ್ರಗಳಲ್ಲಿ ಪಾರದರ್ಶಕತೆ. – ಸಾಂಪ್ರದಾಯಿಕ ಪದ್ಧತಿಯಲ್ಲಿದೆಯೆ? ಆಧುನಿಕರಣವಾಗಿದೆಯೆ? ಗಣಕೀಕರಣ ಅಳವಡಿಸಲಾಗಿದೆಯೆ? ಸೇವಾ ವಿಧಾನಗಳ ಗುಣಮಟ್ಟ– ಒದಗಿಸಲಾಗುತ್ತಿರುವ ಸೌಲಭ್ಯಗಳು– ಸದಸ್ಯರು ಬಳಸುವ ಸರಾಸರಿ. ಸಂಪನ್ಮೂಲಗಳ ಅಭಿವೃದ್ಧಿ– ಪಾಲು ಬಂಡವಾಳ ಮತ್ತು ಕಾಯ್ದಿರಿಸ ನಿಧಿಗಳು–ಠೇವಣಿಗಳು–ಸಾಲಗಳು ಸಂಪನ್ಮೂಲಗಳ ಬಳಕೆ. ಮುಂಗಡಗಳು–ಸಾಲಗಳು– ಸಾಲಗಳ ಪ್ರಕಾರಗಳು – ಸಾಲಗಳ ಮೌಲ್ಯ ಮಾಪನ– ಆದ್ಯತಾ ವಲಯಗಳಿಗೆ ನೀಡಿದ ಸಾಲಗಳು ಸಾಲ ವಸೂಲಾತಿ ಪ್ರಕ್ರೀಯೆ. ಆಸ್ತಿಗಳ ಗುಣಮಟ್ಟ – ಒಟ್ಟು ಗ್ರಾಸ್ ಎನ್.ಪಿ.ಎ.– ತಂತ್ರಗಾರಿಕೆ. ಪ್ರುಡೆನ್ಶಿಯಲ್ ನಾರ್ಮ್ಸ್ ಅನುಪಾಲನೆ . ಆಸ್ತಿಗಳ ಗುಣಮಟ್ಟ– ಸ್ಟಾಂಡರ್ಡ್ ಆಸ್ತಿಗಳು– ಎನ್.ಪಿ.ಎ.ಅವಕಾಶ–ಸಿ.ಅರ್.ಅರ್.–ಎಸ್.ಎಲ್. ಅರ್.ಸಿಅರೆಅರ್–ಸಿ.ಡಿ ಪ್ರಮಾಣ– ಎ.ಎಲ್ ವರದಿ

ಲಾಭಾಂಶ ಕಾಸ್ಟ್ ಆಫ್ ಫಂಡ್ಸ್– ದುಡಿಯುವ ಬಂಡವಾಳದ

ಮೇಲೆ ಲೆಕ್ಕ ಹಾಕಬೇಕು

- ಯಿಲ್ಡ್ ಆನ್ ಅಸೆಟ್ಸ್ ದುಡಿಯುವ ಬಂಡವಾಳದ ಮೇಲೆ ಲೆಕ್ಕ ಹಾಕಬೇಕು
- ಕಾಸ್ಟ್ ಆಫ್ ಮೆನೆಜಮೆಂಟ್– ದುಡಿಯುವ ಬಂಡವಾಳದ ಮೇಲೆ ಲೆಕ್ಕ ಹಾಕಬೇಕು
- ರಿಸ್ಕ್ ಕಾಸ್ಟ್– ದುಡಿಯುವ ಬಂಡವಾಳದ ಮೇಲೆ ಲೆಕ್ಕ ಹಾಕಬೇಕು
- ಬಡ್ಡಿಯೇತರ ಆದಾಯಗಳು
- ಗ್ರಾಸ್ ಮಾರ್ಜಿನ್

- ಸಹಕಾರಿ ಆಡಳಿತವೆ? ಕಾರ್ಪೊರೇಟ್ ಆಡಳಿತವೆ? ಆಡಳಿತ ಮಂಡಳಿ ಸದಸ್ಯರು ಚುನಾಯಿತ ಸದಸ್ಯರೆ? ಆಡಳಿತ ಮಂಡಳಿ ಸದಸ್ಯರಿಗೆ ನೀತಿ ಸಂಹಿತೆ ರಚಿಸಲಾಗಿದೆಯೇ? ದೃಷ್ಟಿ ಮತ್ತು ಧ್ಯೇಯಗಳನ್ನು ಸಾರಲಾಗಿದೆಯೆ?
- ನಿರ್ದೇಶಕರಿಗೆ ತರಬೇತಿ ವ್ಯವಸ್ಥೆ – ಆಡಳಿತ ಮಂಡಳಿ ಸಭೆಗಳು – ಆಡಿಟ್ ಕಮೀಟಿ – 18 ಹೂಡಿಕೆ ನೀತಿ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ ಕೆಲಸಗಳು – ಆಸ್ತಿ ಜವಾಬ್ದಾರಿ ನಿರ್ವಹಣೆಯ ನೀತಿ ಸಿದ್ಧಪಡಿಸಲಾಗುತ್ತಿದೆಯೆ – ಆಪತ್ತು ನಿರ್ವಹಣೆಯ ನೀತಿ ಮುಖ್ಯಕಾರ್ಯನಿರ್ವಾಹಕರ ದಕ್ಷ ಮತ್ತು ಕ್ರೀಯಾಶೀಲ ಕಾರ್ಯನಿರ್ವಹಣೆ.
- ಸಹಕಾರ ಆಶಯಕ್ಕೆ ಪ್ರಾಧಾನ್ಯತೆ.
- ಸಹಕಾರ ಸಂಸ್ಥೆಗಳಲ್ಲಿ ಪರಸ್ಪರ ಸಹಕಾರ ಮತ್ತು ಸಾಮಾಜಿಕ ಕಳಕಳಿ.

ಈ ಮಾನದಂಡಗಳ ಆಧಾರದ ಮೇಲೆ ಸಹಕಾರ ಕ್ಷೇತ್ರದ ಶಕ್ತಿ ಸಾಮರ್ಥ್ಯ, ನ್ಯೂನತೆಗಳು ಅವಕಾಶಗಳು ಹಾಗೂ ಸವಾಲುಗಳ ವಿಶ್ಲೇಷಣೆ ಮಾಡಿದಾಗ ಮುಂಬರುವ ದಿನಗಳಲ್ಲಿ ಸಹಕಾರ ಚಳುವಳಿ ಒಂದು ಉತ್ತಮ ಬಲಿಷ್ಠ ಆರ್ಥಿಕ ವ್ಯವಸ್ಥೆಯಾಗಿ ಕಾರ್ಯನಿರ್ವಹಿಸುವುದು ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಕ್ಕೆ ಬರಬಹುದಾಗಿದೆ.

**ಶಕ್ತಿ ಸಾಮರ್ಥ್ಯ** : ಅಪಾರ ಜನಶಕ್ತಿ–ಸದಸ್ಯರಿಂದಲೇ ಚುನಾಯಿತ ಆಡಳಿತ ಮಂಡಳಿ–ಸ್ಥಳಿಯರಿಂದಲೇ ಆಡಳಿತ – ಸ್ವಾಭಾವಿಕ ಸಂಪನ್ಮೂಲಗಳು – ಸ್ಥಳೀಯ ಮಾನವ ಸಂಪನ್ಮೂಲಗಳು – ಸರಕಾರಗಳ ನೆರವು–ಸ್ಥಳೀಯ ಸಂಸ್ಥೆಗಳ ನೆರವು – ರಾಜಕೀಯ, ಸಾಮಾಜಿಕ ನಾಯಕರುಗಳ, ಸಹಕಾರಿ ಕಾಯ್ದೆಗಳ, ನಿಯಮಗಳ ಹಾಗೂ ಉಪವಿಧಿಗಳ ಹಾಗೂ ಅಧಿಕಾರಿಗಳ ಮಾರ್ಗದರ್ಶನ – ಮಾಧ್ಯಮಗಳ ಸದುಪಯೋಗ – ವಿವಿಧ ಕಂಪನಿಗಳ, ಸಹಕಾರ ಸಂಸ್ಥೆಗಳ ಹಾಗೂ ವಿಶ್ವ ಮಾರುಕಟ್ಟೆಯಲ್ಲಿಯ ವಿದ್ಯಮಾನಗಳು – ಆಧುನಿಕ ತಂತ್ರಜ್ಞಾನ ಬಳಸುವಿಕೆ – ದಕ್ಷ ಹಾಗೂ ಪಾರದರ್ಶಕ ಆಡಳಿತ–ಯೋಜನೆಗಳಿಗೆ ಅವಕಾಶಗಳು. ಮನುಷ್ಯ ಹುಟ್ಟಿನಿಂದ ಸಾಯುವ ವರೆಗೆ ಸಹಕಾರ ಕ್ಷೇತ್ರದ ಸೇವೆ ಒದಗಿಸುವ ಶಕ್ತಿ ಸಹಕಾರ ಕ್ಷೇತ್ರದ್ದು.

**ನ್ಯೂನತೆಗಳು** : ರಾಜಕೀಯ ಹಸ್ತಕ್ಷೇಪ –ಸರಕಾರದ ಹಸ್ತಕ್ಷೇಪ – ಸರಕಾರದ ಸಾಲಮನ್ನಾ, ಬಡ್ಡಿಮನ್ನಾ ಯೋಜನೆಗಳು – ನಾಯಕತ್ವದ ಕೊರತೆ – ಸ್ಪರ್ಧೆ – ಬಂಡವಾಳದ ಕೊರತೆ – ಆಡಳಿತದಲ್ಲಿ ಪಾರದರ್ಶಕತೆಯ ಕೊರತೆ – ಉತ್ತರದಾಯಿತ್ವದ ಅಭಾವ – ವೃತ್ತಿಪರತೆಗೆ ಆದ್ಯತೆ ನೀಡದಿರುವುದು – ಅರ್ಹರಲ್ಲದವರಿಗೆ ತರಬೇತಿ ಇಲ್ಲದವರಿಗೆ ಸಹಕಾರಿ ಸಂಸ್ಥೆಗಳಲ್ಲಿ ನೇಮಕಾತಿ ಮಾಡುವುದು – ಗುಣಮಟ್ಟದ ಸಾಲ ನೀಡದಿರುವಿಕೆ – ಸಾಲ ವಸೂಲಾತಿಗಳಲ್ಲಿ ಪ್ರಭಾವ ಬೀರುವಿಕೆ – ಸಾಂಪ್ರದಾಯಿಕತೆಗೆ ಕಟ್ಟುಬಿಳುವುದು – ಸಾಂಘಿಕ ಮನೋಭಾವದ ಕೊರತೆ – ಜಾತಿ ಮತ ಧರ್ಮಗಳ ಪ್ರವೇಶ –ಸದಸ್ಯರ ನಿರಾಸಕ್ತಿ – ಪಟ್ಟಭದ್ರ ಹಿತಾಸಕ್ತಿಗಳ ಪ್ರಭಾವ – ಸದಸ್ಯರಿಗೆ ಆಡಳಿತ ಮಂಡಳಿಯವರಿಗೆ ಹಾಗೂ ಸಿಬ್ಬಂದಿಯವರಿಗೆ ನಿರಂತರ ಶಿಕ್ಷಣ ಹಾಗೂ ತರಬೇತಿ ವ್ಯವಸ್ಥೆ ಮಾಡದಿರುವುದು – ಸಹಕಾರ ಕ್ಷೇತ್ರ ಬಗ್ಗೆ ಮಾಧ್ಯಮಗಳೂಡನೆ ಸಂಪರ್ಕವಿರಿಸದಿರುವುದು – ಸಹಕಾರಿ ಸಂಸ್ಥೆಗಳ ಸಾಧನೆಗಳ ಬಗ್ಗೆ ಅಗತ್ಯ ಸಕಾರಾತ್ಮಕ ಪ್ರಚಾರ ಮಾಡದಿರುವುದು – ನಕಾರಾತ್ಮಕ ಪ್ರಚಾರಗಳಿಗೆ ತಡೆಯೊಡ್ಡದಿರುವುದು.

**ಅವಕಾಶಗಳು** : ಸರಕಾರದ ವಿವಿಧ ಯೋಜನೆಗಳ ಅನುಷ್ಠಾನ – ಸಂಪನ್ಮೂಲಗಳ ಕ್ರೋಢೀಕರಣಕ್ಕೆ ಅವಕಾಶ ಸದಸ್ಯರ ಜಾಗೃತಿ ಮೂಡಿಸಿ ಸಹಕಾರಿಯೊಡನೆ ಹೆಚ್ಚಿನ ಸಂಬಂದ ಬೆಳೆಸುವಂತೆ ಮಾಡುವ ಅವಕಾಶ – ನಾಯಕತ್ವದ ಬೆಳವಣಿಗೆಗೆ ಅವಕಾಶ – ಆರ್ಥಿಕ ಅಭಿವೃದ್ಧಿಗೆ ಅವಕಾಶ ಸಾಮಾಜಿಕ ಸ್ಥಾನಮಾನಗಳಿಗೆ ಅವಕಾಶ – ಆಕಾಶಕ್ಕೆ ಏಣಿ ಹಾಕುವಷ್ಟು ಯೋಜನೆಗಳನ್ನು ಹಾಕಿಕೊಂಡು ಅನುಷ್ಠಾನಕ್ಕೆ ಅವಕಾಶ – ಮಾಧ್ಯಮಗಳ ಮೂಲಕ ವಿಶ್ವದ ಆರ್ಥಿಕ ಹಾಗೂ ವಿವಿಧ ಸಂಘಟನೆಗಳ ಕಾರ್ಯಚಟುವಟಿಕೆಗಳನ್ನು ತಿಳಿದುಕೊಳ್ಳುವ ಮತ್ತು ತಮ್ಮ ಸಂಸ್ಥೆಯಲ್ಲಿ ಅಳವಡಿಸುವ ಅವಕಾಶ – ಆಧುನಿಕ ತಂತ್ರಜ್ಞಾನದ ಬಳಕೆ – ಗಣಕೀಕರಣದ ಬಳಕೆ – ಸದಸ್ಯರ ದಿನ ನಿತ್ಯದ ಬೇಕು ಬೇಡಿಕೆಗಳನ್ನು ಪೂರೈಸುವ ಅವಕಾಶಗಳು.– ಸಹಕಾರ ಕ್ಷೇತ್ರ ಮುಟ್ಟದಿರುವ ಹೊಸ ಕ್ಷೇತ್ರಗಳನ್ನು ಹುಡುಕಿ ಸಹಕಾರ ಸಂಸ್ಥೆಗಳನ್ನು ಪ್ರಾರಂಭಿಸುವ ಅವಕಾಶಗಳು.

**ಸವಾಲುಗಳು** : ಉದಾರೀಕರಣ / ಜಾಗತೀಕರಣ ಹಾಗೂ ಖಾಸಗೀಕರಣಗಳ ಪ್ರಭಾವದಿಂದ ಮಾರುಕಟ್ಟೆಯಲ್ಲಿ ಸ್ಪರ್ಧೆ– ವೃತ್ತಿಪರತೆಯ ಹಾಗೂ ಪಾರದರ್ಶಕ ಆಡಳಿತ – ಸದಸ್ಯರ ಸಕ್ರೀಯ ಪಾಲುಗಾರಿಕೆ – ಬಂಡವಾಳದ ಕೊರತೆ–ಸರಕಾರದ ಯೋಜನೆಗಳು – ಸರಕಾರದ ಹಸ್ತಕ್ಷೇಪ –ಸಾಂಪ್ರದಾಯಿಕತೆಗೆ ಅಂಟಿಕೊಳ್ಳುವುದು – ದೂರದರ್ಶಿತ್ವವಿಲ್ಲದಿರುವುದು – ಸಹಕಾರ ತತ್ವ, ಸಹಕಾರ ಕ್ಷೇತ್ರದ ಆಶಯಗಳನ್ನು ತಿಳಿಯದಿರುವುದು – ಅನುಷ್ಠಾನಗೊಳಿಸದಿರುವುದು – ವೈಯಕ್ತಿಕ ಹಿತಾಸಕ್ತಿಗಳು ಪ್ರತಿಯೊಂದು ಸರಕಾರ ಹಾಗು ಸಹಕಾರ ಸಂಸ್ಥೆ ಈ ವಿಷಯದ ಬಗ್ಗೆ ಗಮನಹರಿಸಿದಾಗ ಸಹಕಾರಿ ಕ್ಷೇತ್ರದ ಗುಣಮಟ್ಟ ಸುಧಾರಣೆ ಬೆಳವಣಿಗೆ ಸಾಧ್ಯವಾಗುತ್ತದೆ. ತನ್ಮೂಲಕ ದೇಶದ ಸಮಗ್ರ ಆರ್ಥಿಕ ಹಾಗೂ ಸಾಮಾಜಿಕ ಬೆಳವಣಿಗೆಯಲ್ಲಿ ಸಹಕಾರ ಕ್ಷೇತ್ರ ಮಹತ್ವದ ವ್ಯವಸ್ಥೆಯಾಗಿ ಕಾರ್ಯನಿರ್ವಹಿಸಲು ಸಾಧ್ಯ. ■

ಸ್ವಾಭಿಮಾನಿ ಸಹಕಾರಿ

Swabhimani Sahakari, Monthly, Posted at GPO-MBC Bengaluru Post Office 560001,
Posting Day 8th. Registered No. RNP/BGW/1744/2014-16.
RNI No. KARBIL - 2004/18001. Pages 20

# ಅನುಮತಿ ವಾಪಸ್

ಉದ್ದೇಶಿತ ಅಗ್ರಿ ಸಮೃದ್ಧಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ ಮಾಲೂರು ಇದರ ನೋಂದಣಿ ಪೂರ್ವ ಷೇರು ಸಂಗ್ರಹಿಸಲು ನೀಡಿರುವ ಅನುಮತಿಯನ್ನು ಹಿಂಪಡೆಯುವ ಬಗ್ಗೆ ಕರ್ನಾಟಕ ಸರ್ಕಾರ ಸಹಕಾರ ಇಲಾಖೆ ಸಹಕಾರ ಸಂಘಗಳ ನಿಬಂಧಕರ ಕಛೇರಿ ಬೆಂಗಳೂರು ಇವರು ದಿನಾಂಕ 20.06.2014ರಂದು ಪತ್ರ ಸಂಖ್ಯೆ ಆರ್ ಎಸ್ಆರ್/ಸೌಹಾರ್ದ/ನೋಂದಣಿ/70/2013-14 ಪತ್ರದಲ್ಲಿ ಉದ್ದೇಶಿತ ಸಹಕಾರಿಯ ನೋಂದಣಿ ಪೂರ್ವ ಷೇರು ಸಂಗ್ರಹಣೆಗೆ ನೀಡಲಾಗಿದ್ದ ಅನುಮತಿಯನ್ನು ಈ ಕೂಡಲೇ ಜಾರಿಗೆ ಬರುವಂತೆ ಹಿಂಪಡೆಯಲಾಗಿದೆ ಹಾಗೂ ಇನ್ನು ಮುಂದೆ ಸಾರ್ವಜನಿಕರಿಂದ ಷೇರು ಹಣ ಸಂಗ್ರಹಿಸದಿರಲು ಮತ್ತು ಈಗಾಗಲೇ ಸಂಗ್ರಹಿಸಿರುವ ಷೇರು ಹಣವನ್ನು ನಿಯಮಾನುಸಾರ ಸಂಬಂಧಿಸಿದವರಿಗೆ ಹಿಂತಿರುಗಿಸಲು ಸೂಚಿಸಲಾಗಿದೆ ಎಂದು ಡಾ.ಎನ್.ಎಸ್.ಚನ್ನಪ್ಪಗೌಡ ಸಹಕಾರಿಗಳ ನಿಬಂಧಕರು ಕರ್ನಾಟಕ ರಾಜ್ಯ ಬೆಂಗಳೂರು ಇವರು ತಿಳಿಸಿರುತ್ತಾರೆ.

ಅಂತೆಯೇ ಉದ್ದೇಶಿತ ಪೀಪಲ್ಸ್ ಡೆವಲಪ್‌ಮೆಂಟ್ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ ವಿಜಾಪುರ ಇದರ ನೋಂದಣಿ ಪೂರ್ವ ಷೇರು ಸಂಗ್ರಹಿಸಲು ನೀಡಿರುವ ಅನುಮತಿಯನ್ನು ಹಿಂಪಡೆಯುವ ಬಗ್ಗೆ ಕರ್ನಾಟಕ ಸರ್ಕಾರ ಸಹಕಾರ ಇಲಾಖೆ ಸಹಕಾರ ಸಂಘಗಳ ನಿಬಂಧಕರ ಕಛೇರಿ ಬೆಂಗಳೂರು ಇವರು ದಿನಾಂಕ 20.06.2014ರಂದು ಪತ್ರ ಸಂಖ್ಯೆ ಆರ್‌ಎಸ್ ಆರ್/ಸೌಹಾರ್ದ/ನೋಂದಣಿ/196/2013-14 ಪತ್ರದಲ್ಲಿ ಉದ್ದೇಶಿತ ಸಹಕಾರಿಯ ನೋಂದಣಿ ಪೂರ್ವ ಷೇರು ಸಂಗ್ರಹಣೆಗೆ ನೀಡಲಾಗಿದ್ದ ಅನುಮತಿಯನ್ನು ಈ ಕೂಡಲೇ ಜಾರಿಗೆ ಬರುವಂತೆ ಹಿಂಪಡೆಯಲಾಗಿದೆ ಹಾಗೂ ಇನ್ನು ಮುಂದೆ ಸಾರ್ವಜನಿಕರಿಂದ ಷೇರು ಹಣ ಸಂಗ್ರಹಿಸದಿರಲು ಮತ್ತು ಈಗಾಗಲೇ ಸಂಗ್ರಹಿಸಿರುವ ಷೇರು ಹಣವನ್ನು ನಿಯಮಾನುಸಾರ ಸಂಬಂಧಿಸಿದವರಿಗೆ ಹಿಂತಿರುಗಿಸಲು ಸೂಚಿಸಲಾಗಿದೆ ಎಂದು ಡಾ ಎನ್.ಎಸ್.ಚನ್ನಪ್ಪಗೌಡ ಸಹಕಾರಿಗಳ ನಿಬಂಧಕರು ಕರ್ನಾಟಕ ರಾಜ್ಯ ಬೆಂಗಳೂರು ಇವರು ತಿಳಿಸಿರುತ್ತಾರೆ.

# ಸ್ವಾಭಿಮಾನಿ ಸಹಕಾರಿ ಅನಿಸಿಕೆ

● ಸ್ವಾಭಿಮಾನಿ ಸಹಕಾರಿ ಪತ್ರಿಕೆಯು ಸೌಹಾರ್ದ ಸಹಕಾರಿಯ ಒಂದು ಅಂಗವಾಗಿದೆ. ಪತ್ರಿಕೆಯು ರಾಜ್ಯದ ಹೆಮ್ಮೆಯ ಸೌಹಾರ್ದ ಸಹಕಾರಿಗಳ ಹಾಗೂ ಸಹಕಾರಿ ಕ್ಷೇತ್ರದ ಚಿತ್ರಣವನ್ನು ತೆರೆದಿಟ್ಟಿದೆ. ಹಾಗೂ ಸಹಕಾರಿ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವವರಿಗೆ ಚಿಲುಮೆಯ ಸ್ಫೂರ್ತಿಯಾಗಿದೆ. ಇದರ ಜೊತೆಗೆ ಆರ್‌ಬಿಐ ಮತ್ತು ಎನ್‌ಪಿಎಗಳ ಬಗ್ಗೆ ಇನ್ನೂ ಹೆಚ್ಚಿನ ಮಾಹಿತಿಯನ್ನು ಸೌಹಾರ್ದ ಸಹಕಾರಿಗಳಿಗೆ ತಲುಪುವಂತಾದರೆ ಒಳ್ಳೆಯದು.

**▸▸ ಶ್ರೀ ಬಾಬು ಸರ್ವಶ್ರೀ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ, ವಿಜಯಪುರ.**

● ಸೌಹಾರ್ದ ಸಹಕಾರಿ ಚಳುವಳಿಯ ಅಭಿವೃದ್ಧಿಗೆ ಬೇಕಾಗುವಂತಾ ಎಲ್ಲ ಆ ರೀತಿಯ ಮಾರ್ಗದರ್ಶನ ಹಾಗೂ ಕಾಲಕಾಲಕ್ಕೆ ಬದಲಾಗುವ ಕಾನೂನುಗಳ ಬಗ್ಗೆ ತಿಳುವಳಿಕೆಗಳನ್ನು ನೀಡುತ್ತಾ ಇರುವುದು ಹೆಮ್ಮೆಯ ವಿಷಯವಾಗಿದೆ. ಇದರೊಟ್ಟಿಗೆ ಇನ್ನೂ ಬೇರೆ ಬೇರೆ ರಾಜ್ಯಗಳಲ್ಲಿಯ ಸಹಕಾರಿಗಳ ಬೆಳವಣಿಗೆಯ ವಿಷಯಗಳನ್ನು ಪ್ರಕಟಿಸುವಂತಾಗಲಿ.

**– ಶ್ರೀ ಪ್ರವೀಣ್ ಶಿ.ಚಣ್ಣಿ ಶ್ರೀ ಪ್ರಭುಲಿಂಗೇಶ್ವರ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಸಿದ್ದಾಪುರ**

ಇವರಿಂದ ಪ್ರಕಟಿತ :

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**

ನಿರ್ಮಾಣ ಭವನ ಆವರಣ, ಡಾ. ರಾಜಕುಮಾರ ರಸ್ತೆ,
1ನೇ ಬ್ಲಾಕ್ ರಾಜಾಜಿನಗರ. ಬೆಂಗಳೂರು – 10.

web : www.souharda.coop, E-mail : souharda@souharda.coop,

**ದೂ.ಸಂ :** 23378375/76/77/78/79/80 & 23474408, 23573291

ಸಂಪಾದಕ, ಪ್ರಕಾಶಕ : **ಶರಣಗೌಡ ಜಿ.ಪಾಟೀಲ,** ಸಂಚಿಕೆ ಸಿದ್ಧತೆ : **ವಿ.ಜಿ. ಕಾರಕೂನ**

ವಿನ್ಯಾಸ : **ವರ್ಣ ಕಮ್ಯುನಿಕೇಷನ್ಸ್,** ಮುದ್ರಣ : ಶಕ್ತಿ ಪ್ರಿಂಟೆಕ್, ಬೆಂಗಳೂರು.

**ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ ಸಹಕಾರಿಯ ಸಂಪರ್ಕ ದೂರವಾಣಿಗಳು**

| ಹೆಸರು | ಪದನಾಮ | ದೂರವಾಣಿ |
|---|---|---|
| ಶ್ರೀ ಗುರುನಾಥ ಜ್ಯಾಂತಿಕರ್ | ಅಧ್ಯಕ್ಷರು | 8884466701 |
| ಶ್ರೀ ಹೆಚ್ ವಿ. ರಾಜೀವ್ | ಉಪಾಧ್ಯಕ್ಷರು | 8884466702 |
| ಶ್ರೀ ಶರಣಗೌಡ ಜಿ. ಪಾಟೀಲ | ವ್ಯವಸ್ಥಾಪಕ ನಿರ್ದೇಶಕರು | 8884466703 |
| ಶ್ರೀ ನಾರಾಯಣ ಹೆಗಡೆ | ಉಪಪ್ರಧಾನ ವ್ಯವಸ್ಥಾಪಕರು | 8884466704 |
| ಶ್ರೀ ವೈ ಕುಮಾರ್ | ಉಪ ಪ್ರಧಾನ ವ್ಯವಸ್ಥಾಪಕರು | 8884466705 |
| ಶ್ರೀ ಶ್ರೀಕಾಂತ್ ಬರುವೆ | ಸಹ ಪ್ರಧಾನ ವ್ಯವಸ್ಥಾಪಕರು | 8884466706 |
| ಶ್ರೀ ರಘುನಂದನ್ ಕೆ. | ಸಹ ಪ್ರಧಾನ ವ್ಯವಸ್ಥಾಪಕರು | 8884466707 |
| ಶ್ರೀಮತಿ ಕೃತಿ ಜನಾರ್ಧನ್ | ಸಹ ಪ್ರಧಾನ ವ್ಯವಸ್ಥಾಪಕರು | 8884466708 |
| ಶ್ರೀಮತಿ ಶೋಭಾ ಆರ್. | ಸಹ ಪ್ರಧಾನ ವ್ಯವಸ್ಥಾಪಕರು | 8884466709 |
| ಶ್ರೀ ವಿ.ಜಿ. ಕಾರಕೂನ | ತರಬೇತಿ ಅಧಿಕಾರಿ | 8884466710 |
| ಶ್ರೀ ಜಿ.ಎಸ್. ತೋಪ್ಪಣ್ಣವರ್ | ಬೆಳಗಾವಿ ವಿಭಾಗಾಧಿಕಾರಿ | 8884466711 |
| ಶ್ರೀ ಶಿವಕುಮಾರ ಬಿರಾದಾರ | ಮೈಸೂರು ವಿಭಾಗಾಧಿಕಾರಿ | 8884466712 |
| ಶ್ರೀ ಸಂಜಯ್ ಕೊರಟ್‌ಕರ್ | ಗುಲ್ಬರ್ಗಾ ವಿಭಾಗಾಧಿಕಾರಿ | 8884466714 |

**ಬೆಳಗಾವಿ ವಿಭಾಗೀಯ ಕಛೇರಿಯ ವಿಳಾಸ : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ವಿಭಾಗೀಯ ಕಛೇರಿ #436, ಮೊದಲನೆಯ ಮಹಡಿ, ಹುಯಿಲಗೋಳ ಕಟ್ಟಡ ಶನಿ ಮಂದಿರ ಹತ್ತಿರ, ಪಾಟೀಲ ಗಲ್ಲಿ, ಬೆಳಗಾವಿ-590001 ದೂ.ಸಂ : 0831-2401551.**

**ಗುಲ್ಬರ್ಗಾ ವಿಭಾಗೀಯ ಕಛೇರಿಯ ವಿಳಾಸ : ಗುಲ್ಬರ್ಗಾ ನಂ 1-4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ ಗಾರ್ಡನ್ ರಸ್ತೆ, ಗುಲ್ಬರ್ಗಾ – 585102. ದೂ. 08472-270222.**

Edited, Printed and Published by Sharangouda G. Patil –Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010